ತಿಂಗಳ ಪತ್ರಿಕೆ ಜೂನ್ 1989



ಮಾನಸ

ಸಂಪುಟ : ೨ ಸಂಚಿಕೆ : ೬

ಜುಲೈ ೧೯೮೯

ಸಂಪಾದಕೀಯ ಮಂಡಳಿ

ರಾಜೇಶ್ವರಿ ಎಚ್. ಎಸ್., ಸರಸ್ವತಿ ದು.,
ಚಂಪಾವತಿ ಎಚ್. ಎಸ್., ವೇದ,
ಸವಿತ ಎ., ಗೀತಾ ಜಿ. ಎಸ್.

ಸಲಹೆ—ಸಹಕಾರ

ವಿಜಯ

ವಿಳಾಸ "ಮಾನಸ ತಿಂಗಳ ಪತ್ರಿಕೆ"
ಪಂಚಾಯಿತಿ ರಸ್ತೆ
ಕಾಡುಗೋಡಿ (ಪೊ.)
ಬೆಂಗಳೂರು—**560-067.**

ಬಿಡಿಪ್ರತಿ: 2 ರೂ.

ಸೂಚನೆ: ವಾರ್ಷಿಕ ಚಂದಾ :**15**ರೂ.
ಆಜೀವ ಚಂದಾ :**250**ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ............

ವಿ ಸೂ: ಈ ಸಂಚಿಕೆಯ ಮುಖಪುಟದಲ್ಲಿ ಜೂನ್ ಎಂದು ತಪ್ಪಾಗಿ ಮುದ್ರಿತವಾಗಿದೆ. ಜುಲೈ ಎಂದು ಓದಿಕೊಳ್ಳಬೇಕಾಗಿ ಓದುಗರಲ್ಲಿ ವಿನಂತಿ.

ಮುಖಪುಟ ಧನಲಕ್ಷ್ಮಿ



ಸಂಪಾದಕೀಯ

ಅತ್ಯಾಚಾರ ಪ್ರಕರಣವೊಂದರಲ್ಲಿ ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ಮಹಿಳಾ ಹಕ್ಕುಗಳ ರಕ್ಷಣೆಯಲ್ಲಿ ಕಾನೂನಿನ ವೈಫಲ್ಯವನ್ನು ಎತ್ತಿ ಹಿಡಿದಿದೆ.

ಹರಿಯಾಣದ ಸುಮನ್ ರಾಣಿಯ ಮೇಲೆ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಮಾಡಿದ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ, ತಿದ್ದುಪಡಿಯಾದ ಅತ್ಯಾಚಾರ ಕಾನೂನಿನ ಅನ್ವಯ ಸೆಷನ್ಸ್ ನ್ಯಾಯಾಲಯ ೧೦ ವರ್ಷಗಳ ಕಠಿಣ ಶಿಕ್ಷೆ ವಿಧಿಸಿತ್ತು. ಹೈಕೋರ್ಟ್ ಸಹ ಈ ತೀರ್ಪನ್ನು ಎತ್ತಿ ಹಿಡಿಯಿತು. ಆದರೆ ಸುಪ್ರೀಂ ಕೋರ್ಟ್ ಈ ಶಿಕ್ಷೆಯ ಅವಧಿಯನ್ನು ಅರ್ಧದಷ್ಟು ಕಡಿಮೆ ಮಾಡಿತು. ಇದಕ್ಕೆ ಈ ದೇಶದ ಅತಿ ಉಚ್ಚ ನ್ಯಾಯಾಲಯ ನೀಡಿದ ಕಾರಣ—"ಪದೇ ಪದೇ ಲೈಂಗಿಕ ಅನುಭವಕ್ಕೆ ಒಳಗಾಗುವ ಅಭ್ಯಾಸ" ಇರುವ ಸುಮನ್ ರಾಣಿಯ ಚಾರಿತ್ರ್ಯವೇ "ಪ್ರಶ್ನಾರ್ಹ" ವಾದದ್ದು.


ರಾಷ್ಟ್ರದಲ್ಲಿ ಅನೇಕ ಮಹಿಳಾ ಸಂಘಟನೆಗಳ ಒಗ್ಗೂಡುವಿಕೆಗೆ ಕಾರಣವಾಗಿ, ಅತ್ಯಾಚಾರ ಕಾನೂನು ತಿದ್ದುಪಡಿಗೆ ಕಾರಣವಾದ ಮಥುರಾ ಅತ್ಯಾಚಾರ ಪ್ರಕರಣದ ತೀರ್ಪಿನ ೧೧ ವರ್ಷಗಳ ನಂತರ ಹೊರಬಿದ್ದಿರುವ ಈ ತೀರ್ಪು, ಮಹಿಳಾ ಚಳುವಳಿಯನ್ನು ಅಣಕಿಸಿದಂತಾಗಿದೆ. ಅತ್ಯಾಚಾರ ತಿದ್ದುಪಡಿ ಕಾನೂನಿನಿಂದ ಲಭ್ಯವಾದ ಅಲ್ಪ ನೆಲೆಯನ್ನು ಈ ತೀರ್ಪು ಅಲುಗಾಡಿಸಿದೆ.

ಅತ್ಯಾಚಾರ ತಿದ್ದುಪಡಿ ಕಾನೂನಿಂದ, ಈ ಅಪರಾಧ ನಿಯಂತ್ರಣದಲ್ಲಿ ಯಾವುದೇ ನೆರವಾಗಿಲ್ಲ. ಇದಕ್ಕೆ ರಾಷ್ಟ್ರದಲ್ಲಿ ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳೇ ಸಾಕ್ಷಿ.

೧೯೮೩ರಲ್ಲಿ ರಾಷ್ಟ್ರದಲ್ಲಿ ೫,೨೯೮ ಅತ್ಯಾಚಾರ ಪ್ರಕರಣಗಳು ವರದಿಯಾಗಿದ್ದವು. ೧೯೮೪ರಲ್ಲಿ ಇದು ೬,೨೦೩ಕ್ಕೆ ಏರಿತು. ೧೯೮೫ರಲ್ಲಿ ಇದು ಮತ್ತೆ ೬,೩೫೬ಕ್ಕೆ ಏರಿತು. ಇದರಿಂದ ಮೂರು ವರ್ಷದಲ್ಲಿ ಶೇ. ೨೦ರಷ್ಟು ಏರಿಕೆ ಕಂಡು ಬಂದಿದೆ.

ಅತ್ಯಾಚಾರ ಪ್ರಕರಣ ಆರೋಪಿಗಳಿಗೆ ಕಟ್ಟುನಿಟ್ಟಾಗಿ ಶಿಕ್ಷೆ ವಿಧಿಸುವಲ್ಲಿ ರಾಜಕೀಯ ಹಾಗೂ ಆಡಳಿತ ಸಂಕಲ್ಪ ಪ್ರದರ್ಶಿತವಾಗಬೇಕಿದೆ.

ಸಂವೇದನಾಶೀಲ ಕಲಾವಿದೆ – ಧನಲಕ್ಷ್ಮಿ.



ಇತ್ತೀಚೆಗೆ ಸ್ತ್ರೀ ಕಲಾಕಾರರ ಹೆಸರುಗಳು ಕಲಾಪ್ರಪಂಚದಲ್ಲಿ ಸಾಕಷ್ಟು ಕೇಳಿಬರುತ್ತಿವೆ. ಗಂಭೀರ ಅಧ್ಯಯನದೊಂದಿಗೆ ಕಲಾಪ್ರಪಂಚದಲ್ಲಿ ತಮ್ಮ ನೆಲೆ ಕಂಡುಕೊಳ್ಳಲು ಇವರುಗಳು ಬಯಸುತ್ತಿದ್ದಾರೆ. ಅಮೃತ ಶೇರ್‌ಗಿಲ್‌ರವರಂತೆ ಕಲಾ ಪ್ರಪಂಚದಲ್ಲಿ ಸಾಕಷ್ಟು ನಕ್ಷತ್ರಗಳು ನಮ್ಮ ಮಧ್ಯೆ ಮಿನುಗುತ್ತಿರುವುದು ಹರ್ಷದ ಸಂಗತಿ.

ಅದ್ಭುತ ಜನಪ್ರಿಯ ಶಿಲ್ಪಿ ರೋಡಿನ್‌ನ ಜೊತೆಗಾತಿ ಕ್ಯಾಮಿಲ್ ಕ್ಲಾಡೆಲ್ ಅತ್ಯಂತ ಮಹತ್ವದ ಕೃತಿಗಳನ್ನು ರಚಿಸಿದ್ದಳು. ಆದರೆ ಬದುಕಿರುವವರೆಗೂ ಆಕೆಯ ಕೃತಿಗಳು ಯಾವ ಅಸ್ತಿತ್ವವನ್ನು ಪಡೆದುಕೊಳ್ಳಲಿಲ್ಲ. ಆಕೆಯ ಸಾವಿನ ನಂತರ ಆಕೆ ಜನಪ್ರಿಯ ಕಲಾಕಾರಳಾದಳು. ರೋಡಿನ್‌ನ ಕೀರ್ತಿ ಶಿಖರದಡಿಯಲ್ಲಿ ಬದುಕಿರುವವರೆಗೂ ಆಕೆ ಅಜ್ಞಾತಳಾಗಿದ್ದಂತಹ ದುರಂತಗಳು ಆಕೆಯದು ಮಾತ್ರವಲ್ಲ, ಈ ಮಾತು ಎಷ್ಟೋ ಸ್ತ್ರೀ ಕಲಾಕಾರರಿಗೆ ಅನ್ವಯಿಸುತ್ತದೆ.

ಇಂತಹ ಸಂದರ್ಭದಲ್ಲಿ ಸ್ತ್ರೀ ಕಲಾಕಾರರೊಂದಿಗೆ ಸಂವಾದ ಬೆಳೆಸುವುದು — ಅವರ ಅಸ್ತಿತ್ವದ ಸೆಲೆಗಳಿಗೆ ನೆಲೆಯಾಗುವುದು ನಮ್ಮ ಸಾಂಸ್ಕೃತಿಕ ವಾತಾವರಣದಲ್ಲಿ ನಮ್ಮೆಲ್ಲರ ಅಗತ್ಯವಾದ ಕರ್ತವ್ಯವಾಗುತ್ತದೆ.

ಈ ಹಿನ್ನೆಲೆಗಳಲ್ಲಿ ಕರ್ನಾಟಕದ ಕಲಾಕಾರ್ತಿಯಾದ ಧನಲಕ್ಷ್ಮಿಯವರೊಂದಿಗೆ ಸರಸ್ವತಿ ಮು.. ಸವಿತಾ ಎ. ನಡೆಸಿದ ಸಂದರ್ಶನ ಇಲ್ಲಿದೆ.

ಸಂದರ್ಶಕರು ; **ಸರಸ್ವತಿ ದು., ಸವಿತಾ ಎ.**

ಪ್ರ: ನಿಮಗೆ ಕಲೆಯಲ್ಲಿ ಹೇಗೆ ಆಸಕ್ತಿ ಮೂಡಿತು? ನಿಮ್ಮ ವೃತ್ತಿಗೆ ಸಿಕ್ಕ ಬೆಂಬಲ ಪ್ರೋತ್ಸಾಹ ಯಾವ ರೀತಿಯದು?

ಉ: ನಮ್ಮನೆಯಲ್ಲಿ ಸಂಗೀತದ ಒಲವು ಜಾಸ್ತಿ ಇತ್ತು. ಅದರಲ್ಲೂ ನಮ್ಮ ತಾಯಿಗೆ ನಾನು ಸಂಗೀತ ಕಲಿಯಬೇಕೆಂಬ ವಿಶೇಷ ಆಸಕ್ತಿ ಇತ್ತು. ನಾನು ಶಾಲೆಯಲ್ಲಿ ಡ್ರಾಯಿಂಗ್ ಹೇಳಿಕೊಡುವುದನ್ನು ಇಷ್ಟಪಡುತ್ತಿದ್ದೆ. ಬಣ್ಣಗಳು ಇಷ್ಟವಾಗುತ್ತಿದ್ದವು. ನಾನು ಕಲಿಯಲು ಶುರು ಮಾಡಿದ್ದು ಕೆನ್ ಕಲಾ ಶಾಲೆಯಲ್ಲಿ. ಅಲ್ಲಿ ಪ್ರಿನ್ಸಿಪಾಲರಾಗಿದ್ದ ಆರ್. ಎಂ. ಹಡಪದ್ ಅವರು ತುಂಬಾ ಉತ್ತೇಜನ ನೀಡಿದರು. ಮೊದಲು ಅವರ ಕಲಾಶಾಲೆ ಬಸವನಗುಡಿಯಲ್ಲಿತ್ತು. ಶಾಲೆಗೆ ಸರಿಯಾದ ಪ್ರೋತ್ಸಾಹ ಸಿಗದೆ ಹಡಪದ್‌ರವರು ಬಾಂಬೆಗೆ ಹೋಗಬೇಕೆಂದಿದ್ದರು. ನಮ್ಮ ತಂದೆ ಹಾಗು ಇನ್ನಿತರ ಸ್ನೇಹಿತರು ಸೇರಿ, ಇಲ್ಲೆ ಕಲಾಶಾಲೆಯನ್ನು ಶುರುಮಾಡಿ ಹಡಪದ್‌ರವರನ್ನು ಇಲ್ಲಿಯೇ ಇರಬೇಕೆಂದು ಕೇಳಿಕೊಂಡರು. ಹಾಗೆ ಶುರುಮಾಡಿದ ಶಾಲೆಯೇ ಈಗಿನ "ಕೆನ್ ಕಲಾಶಾಲೆ". ನನ್ನ ಡಿಪ್ಲೊಮಾ ಮುಗಿದ ತಕ್ಷಣವೆ ಕಾರ್ಪೊರೇಶನ್ ಶಾಲೆಯಲ್ಲಿ ಕೆಲಸ ಸಿಕ್ಕಿತು. ಹೀಗೆ ಕೆನ್ ಕಲಾಶಾಲೆಯಲ್ಲಿ ಹಾಗು ಕಾರ್ಪೊರೇಶನ್ ಶಾಲೆಯಲ್ಲಿ ಚಿತ್ರಕಲೆಯನ್ನು ಕಲಿಸುವುದನ್ನು ಮುಂದುವರೆಸಿಕೊಂಡು ಬಂದಿದ್ದೇನೆ. ಮನೆ ಹಾಗೂ ಕಲಾಶಾಲೆ ಎರಡು ಕಡೆಯಲ್ಲೂ ನನಗೆ ಒಳ್ಳೆಯ ಬೆಂಬಲ ಸಿಕ್ಕಿದೆ.

ಪ್ರ. ಇತ್ತೀಚೆಗೆ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ತಕ್ಕಷ್ಟು ಪ್ರೋತ್ಸಾಹ ಸಿಗುತ್ತಿದೆಯಾದರೂ, ಯಾವುದೆ ಕಲೆಯನ್ನು ವೃತ್ತಿಯನ್ನಾಗಿ ತೆಗೆದುಕೊಳ್ಳಲು ಸರಿಯಾದ ಪ್ರೋತ್ಸಾಹ ಸಿಗುತ್ತಿಲ್ಲ. ಕಲೆಯನ್ನು ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಂಡಾಗ ಅನೇಕ ಸಮಸ್ಯೆಗಳನ್ನೆದುರಿಸಬೇಕಾಗುತ್ತದೆ, ಅಂತಹ ಕಲಾವಿದೆಯರು

ಎದುರಿಸುವ ವಿಶಿಷ್ಟ ಸಮಸ್ಯೆಗಳೇನು ?

ಉ: ಕೆಲವು ವರುಷಗಳ ಹಿಂದೆ, ನಾವು ಚಿತ್ರಕಲೆಯನ್ನು ಅಭ್ಯಾಸ ಮಾಡುತ್ತಿದ್ದ ಕಾಲದಲ್ಲಿ, ಮಹಿಳೆಯರಿಗಾಗಲಿ, ಪುರುಷರಿಗಾಗಲಿ ಪ್ರೋತ್ಸಾಹ ಸಿಗುತ್ತಿರಲಿಲ್ಲ. ಅದರಿಂದೇನು ಉಪಯೋಗವೆಂಬ ಭಾವನೆಯಿತ್ತು. ಕಲಿಯಲು ಬರುತ್ತಿದ್ದ ಹುಡುಗಿಯರು ತೀರಾ ಕಡಿಮೆ. ಇತ್ತೀಚೆಗೆ ಅಂತಹ ಧೋರಣೆಗಳು

ಧನಲಕ್ಷ್ಮಿಯವರು ಚಿತ್ರಕಲಾ ಪರಿಷತ್, ಡಿ. ವೈ. ಸಿ. ಓ., ಕರ್ನಾಟಕ ಸಾಹಿತ್ಯ ಪರಿಷತ್, ಗಾಂಧಿ ಸೆಂಟನರಿ ಕಮಿಟಿ, ಹಾಗೂ ಕರ್ನಾಟಕ ಲಲಿತ ಅಕಾಡಮಿಗಳಿಂದ ಪ್ರಶಸ್ತಿ ಹಾಗೂ ಮನ್ನಣೆ ಪಡೆದಿದ್ದಾರೆ.

ಬದಲಾಗಿವೆ. ಆಗ "ಡ್ರಾಯಿಂಗ್ ಟೀಚರ್ಸ್ ಕೋರ್ಸ್" ಎಂಬ ಡಿಪ್ಲೊಮೋ ಕೋರ್ಸ್ ಇತ್ತು. ಈಗ ಅದನ್ನು ಡ್ರಾಯಿಂಗ್ ಮಾಸ್ಟರ್ಸ್ ಕೋರ್ಸ್ ಎಂದು ಕರೆಯುತ್ತಾರೆ. ಚಿತ್ರಕಲೆಯನ್ನು ವೃತ್ತಿಯಾಗಿ ತೆಗೆದುಕೊಂಡಾಗ ಮಹಿಳೆಯರಿಗೆ ಅನೇಕ ಸಮಸ್ಯೆಗಳೆದುರಾಗುತ್ತವೆ. ಕಮರ್ಶಿಯಲ್ ಆರ್ಟ್ ತೆಗೆದುಕೊಂಡಾಗ ಸ್ತ್ರೀ ಕಲಾಕಾರರಿಗೆ ಕೆಲವು ಸಮಸ್ಯೆಗಳಿವೆ. ಕಮರ್ಶಿಯಲ್ ಆರ್ಟ್‌ಗೆ ಸಾಮಾನ್ಯವಾಗಿ ಹುಡುಗಿಯರು ಹೋಗುವುದೇ ಇಲ್ಲ. ಫರ್ಮ್ಸ್ ಕೂಡ ಸ್ತ್ರೀ ಕಲಾಕಾರರಲ್ಲಿ ನಂಬಿಕೆ ಇಡೋದೆ ಇಲ್ಲ. ಸ್ತ್ರೀಯರೆಲ್ಲಿ ಮಾಡ್ತಾರೆ, ಅವರಿಗೆ ಏನು ಯೋಗ್ಯತೆ ಇದೆ, ಅವರಿಗೆ ಮಾಡೋಕೆ ಸಾಧ್ಯವಾಗೋದೆ ಇಲ್ಲ ಎನ್ನುವ ಒಂದು ಜಡ್ಜ್‌ಮೆಂಟ್. ಮಾಡಿದ್ರೂ ಕೂಡ, ಟೀಸ್ ಮಾಡಲಾಗುತ್ತೆ. ಕೆಲವು ಕಡೆ ಚೆನ್ನಾಗಿ ಮಾಡಿಸಿಕೊಂಡು ಅದಕ್ಕೆ ಏನು ನಿಗದಿಯಾದ ರೇಟ್ ಕೂಡ ಬರೋಲ್ಲ, ಅದನ್ನು ಕೊಡದೇ ಮೋಸ ಮಾಡಿದ್ದೂ ಇದೆ.

ಪ್ರ: ಕೆಲವು ಸಾರಿ, ವಿದ್ಯಾರ್ಥಿನಿಯರೂ ಕಮರ್ಶಿಯಲ್ ಆರ್ಟ್ಸ್ ಕ್ಷೇತ್ರಕ್ಕೆ ಕಾಲಿಡಲು ಹಿಂಜರಿಯುತ್ತಾರೆ. ಅವರು ಅದಕ್ಕೆ ವಿದ್ಯಾರ್ಥಿಗಳು ತೋರಿಸುವ ಹಾಗೆ ಆಸಕ್ತಿ ತೋರಿಸದಿರಲು ಕಾರಣವೇನು ?

ಉ: ಪೈಂಟಿಂಗ್ ಕಲಿಯಲು ವಿದ್ಯಾರ್ಥಿನಿಯರು ಹಿಂಜರಿಯುತ್ತಾರೆ. ಅದೇ ಹುಡುಗರು ಅದನ್ನು ಬೇಗ ಕಲಿತು ಅದರಿಂದ ಆದಾಯ ಬರೋ ಹಾಗೆ ಮಾಡಿ ಕೊಳ್ತಾರೆ. ಕೆಲವು ಹುಡುಗಿಯರು ಪ್ರಯತ್ನ ಪಟ್ಟು ಅದನ್ನು ರೂಢಿಸಿಕೊಳ್ತಾರೆ. ಕಮರ್ಶಿಯಲ್ ನಮಗೆ ಬರೋಲ್ಲ, ಲೆಟ್ರಿಂಗ್ಸ್ ನಮಗೆ ಬರೋಲ್ಲ ಅನ್ನೋ ಭಾವನೆ ಹುಡುಗಿಯರಲ್ಲಿ ಸಾಮಾನ್ಯವಾಗಿ ಇರುತ್ತೆ, ಕಮರ್ಶಿಯಲ್‌ನಲ್ಲಿ ಅವರಿಗೆ ಅವಕಾಶವಿಲ್ಲದಿರುವುದರಿಂದ ಟೀಚಿಂಗ್‌ಗೆ ಹೆಚ್ಚು ಮಹಿಳೆಯರು ಹೋಗುತ್ತಿದ್ದಾರೆ.

ಮಹಿಳೆಯರು ಸಾಮಾನ್ಯವಾಗಿ ಸಂಜೆ ಕಲಾಶಾಲೆಗಳನ್ನು ನಡೆಸುವುದು. ಮುಖ್ಯವಾಗಿ ಪೈಂಟಿಂಗ್ ಜಾಬ್‌ನ್ನು ಒಂದು ಸೈಡ್ ಇನ್‌ಕಂ ಬರುವ ಹಿನ್ನೆಲೆಯಲ್ಲಿ ನೋಡುತ್ತಾರ. ಆದ್ರೆ ಕಮರ್ಶಿಯಲ್ ಆರ್ಟ್‌ನಲ್ಲಿ ಹುಡುಗಿಯರು ಇಲ್ಲವೇ ಇಲ್ಲವೆನ್ನಬಹುದು. ಪ್ರಯತ್ನ ಪಟ್ಟಂತ ವಿದ್ಯಾರ್ಥಿನಿಯರು ಬೆಳಿಗ್ಗೆಯಿಂದ ರಾತ್ರಿವರೆಗೆ ದುಡಿದರು ಪ್ರತಿಫಲ ಸಿಗದಿದ್ದಾಗ ನಿರಾಶರಾಗಿ ಟ್ಯೂಶನ್, ಹವ್ಯಾಸ ಪೈಂಟಿಂಗ್ ಹೇಳಿಕೊಡುವುದನ್ನು ಅವಲಂಬಿಸುತ್ತಾರೆ. ಕಮರ್ಶಿಯಲ್ ಆರ್ಟ್‌ನಲ್ಲಿ ಒಂದು ನಿರ್ಧಿಷ್ಟ ಪೇಮೆಂಟ್ ಸಿಸ್ಟಂ ಪುರುಷರಿಗಿರುವಂತೆ ಸ್ತ್ರೀ ಕಲಾಕಾರರಿಗೆ ಇರುವುದಿಲ್ಲ. ಕಮರ್ಶಿಯಲ್ ಆರ್ಟಿಸ್ಟ್ ಆದ ಪುರುಷನಿಗೆ ಒಂದು ವರ್ಷದ ನಂತರ ಸಾಕಷ್ಟು ಆರ್ಥಿಕವಾಗಿ ಪ್ರೋತ್ಸಾಹ ಸಿಕ್ಕಿರುತ್ತೆ ಸಾವಿರಗಟ್ಟಲೆ ದುಡಿಯುತ್ತಾನೆ. ಓವರ್ ಟೈಂ ದುಡಿದು ಒಂದು ಗಂಟೆಗೆ ಎರಡು ಪಟ್ಟು ಸಂಪಾದಿಸುತ್ತಾನೆ, ಆದರೆ ಪೇ ಸಿಸ್ಟಂನಲ್ಲಿ ಸ್ತ್ರೀಯರಿಗೆ ಅಷ್ಟು ಸ್ಟ್ಯಾಂಡ್ ಆಗಲು ಸಾಧ್ಯವಾಗುವುದಿಲ್ಲ. ಕೆಲವು ಸ್ತ್ರೀ ಕಲಾಕಾರರು ಪುರುಷರೊಂದಿಗೆ ಸೇರಿಕೊಂಡು ಶೇರ್ ಹೋಲ್ಡರ್ಸ್ ಆಗಿ ಪ್ರಯತ್ನಿಸಿ

ಫರ್ಮ್ಸ್ ಕೂಡ ಸ್ತ್ರೀ ಕಲಾಕಾರರಲ್ಲಿ ನಂಬಿಕೆ ಇಡೋದೇ ಇಲ್ಲ. ಸ್ತ್ರೀಯರೆಲ್ಲಿ ಮಾಡ್ತಾರೆ. ಅವರಿಗೆ ಏನು ಯೋಗ್ಯತೆ ಇದೆ. ಅವರಿಗೆ ಮಾಡೋಕೆ ಸಾಧ್ಯವಾಗುವುದೇ, ಇಲ್ಲ. ಎನ್ನುವ ಒಂದು ಜಡ್ಜಮೆಂಟ್. ಮಾಡಿದ್ರೂ ಕೂಡ, ಟೀಸ್ ಮಾಡಲಾಗುತ್ತೆ ಕೆಲವು ಕಡೆ ಚೆನ್ನಾಗಿ ಮಾಡಿಸಿಕೊಂಡು ಅದಕ್ಕೆ ಏನು ನಿಗದಿಯಾದ ರೇಟ್ ಕೂಡ ಬರೋಲ್ಲ. ಅದನ್ನು ಕೊಡದೇ ಮೋಸ ಮಾಡಿದ್ದು ಇದೆ.

ಸೋತಿದ್ದಾರೆ. ಹಣ ಹಾಕಿದ್ರು ನೀವು ಕೆನ್ ಸ್ಕೂಲಿನಲ್ಲಿ ಪೈಂಟಿಂಗ್ ಕಲಿತವರಲ್ಲವೆ? ಲೆಟ್ರಿಂಗ್ ಬರಲ್ಲ ಸುಮ್ನೆ ಕಲರ್ ಮಾಡಿ ಪೇಸ್ಟ್ ಮಾಡಿ ಸಾಕು ಎಂದು ಹೇಳ್ತಾರೆ.

ಪ್ರ: ಯಾರು ಹಾಗೆ ಹೇಳೋದು ?

ಉ: ಶೇರ್ ಹೋಲ್ಡರ್ಸ್ ಹೇಳ್ತಾರೆ. ಸಾಮಾನ್ಯವಾಗಿ ಬರೋಡಾದಿಂದ ಬಂದಂತಹ ವಿದ್ಯಾರ್ಥಿಗಳು ಹಾಗು ದಾವಣಗೆರೆ ಕಮರ್ಶಿಯಲ್ ಆರ್ಟ್ಸ್ ಸ್ಕೂಲಿನಿಂದ ಬಂದಂತಹ ವಿದ್ಯಾರ್ಥಿಗಳು. ಅಂದರೆ ಪುರುಷರ ಡಾಮಿನೆನ್ಸ್ ಇರುತ್ತೆ. ಇದು ನಮ್ಮ ಹಕ್ಕು ನಾವೇ ಮಾಡಬಲ್ಲೆವು ಹುಡುಗಿಯರಿಗೆ ಬರಲ್ಲ ಅನ್ನೋ ಒಂದು ಟ್ರೆಂಡ್ ಬೆಳೆಸುತ್ತಿದ್ದಾರೆ. ಇದನ್ನು ಬಲವಂತವಾಗಿ ಮತ್ತು ಮಾನಸಿಕವಾಗಿ ಮಹಿಳೆಯರು ತಲೆಯಲ್ಲಿ ತುಂಬಿಕೊಳ್ಳುತ್ತಿದ್ದಾರೆ.

ಯಾವುದೇ ಒಂದು ಕಮರ್ಶಿಯಲ್ ಕೆಲಸವನ್ನು ಒಪ್ಪಿಕೊಂಡಾಗ ಅದಕ್ಕೆ ಸಂಬಂಧಪಟ್ಟ ಕೆಲಸಗಳನ್ನೂ ಸಾಮಾನ್ಯವಾಗಿ ಮಾಡಬೇಕಾಗುತ್ತದೆ. ಪುರುಷರು ಇಂತಹ ಕೆಲಸಗಳನ್ನು ಕಾಂಟ್ರ್ಯಾಕ್ಟ್ ತೆಗೆದುಕೊಳ್ಳುತ್ತಾರೆ. ಒಂದು ಕಾರ್ಯಕ್ರಮಕ್ಕೆ ಬ್ಯಾನರ್ ಬರೆಯಲು ಒಪ್ಪಿಕೊಂಡರೆ, ಅದನ್ನು ಪೈಂಟ್ ಮಾಡುವುದರಿಂದ ಹಿಡಿದು ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕಟ್ಟುವ ಜವಾಬ್ದಾರಿಯನ್ನೂ ವಹಿಸಿಕೊಳ್ಳಬೇಕಾಗುತ್ತದೆ. ನಮಗೆ ಮಹಿಳೆಯರಿಗೆ ಕೆಲವು ಫಿಸಿಕಲ್ ಲಿಮಿಟೇಶನ್ಸ್ ಇವೆ. ಇಂತಹ ಕೆಲಸಗಳನ್ನು ಮಾಡಲು ಬೇರೆಯವರನ್ನು ಅವಲಂಬಿಸ ಬೇಕಾಗುತ್ತದೆ. ಬರುವ ಹಣವನ್ನು ಈ ರೀತಿ ವಿನಿಯೋಗಿಸ ಬೇಕಾಗುತ್ತದೆ. ಇದನ್ನು ಪುರುಷರು ಮಾಡಿದಾಗ ಎಷ್ಟು ಲಾಭದಾಯಕವಾಗಿರುತ್ತೋ, ಅಷ್ಟು ಮಹಿಳೆಯರು ಮಾಡಿದಾಗ ಆಗಿರುವುದಿಲ್ಲ.

ಪ್ರ: ಕಮರ್ಶಿಯಲ್ ಆರ್ಟ್ಸ್‌ನ್ನು ಒಪ್ಪಿಕೊಳ್ಳಲು ಮಹಿಳೆಯರು ಹಿಂಜರಿಯಲು ಪ್ರಮುಖವಾಗಿ ಕೌಟುಂಬಿಕ ಜವಾಬ್ದಾರಿ, ಸಮಯಾಭಾವ ಮುಂತಾದವು ಕಾರಣಗಳೆಂದೆನಿಸುತ್ತದೆಯೆ ?

ಉ: ಸಮಯ ಅಂದ್ರೆ - ತಂದೆ ತಾಯಿಯ ಪ್ರೋತ್ಸಾಹ ಇರೋಲ್ಲ. ಪುರುಷರ ತರ ಇವರಿಗೆ ರಾತ್ರಿಗಳಲ್ಲಿ ಕಷ್ಟಪಟ್ಟು ಹೊರಗಡೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ರಾತ್ರಿ ತಡವಾಗಿ ಹೋದರೆ ಸಮಾಜ ಏನು ಅನ್ನುತ್ತೋ ಎಂಬ ಭಯ. ಅದ್ರಬದ್ಲಾಗಿ ಅವರು ಕಲೆಯನ್ನು ಕಲಿಸುವ ವೃತ್ತಿಯನ್ನು ಆಯ್ಕೆಮಾಡಿಕೊಳ್ತಾರೆ. ಪೋಸ್ಟರ್ ಬರೆಯುವುದು, ಸ್ಲೈಡ್‌ಗಳನ್ನು ತಯಾರಿಸುವುದು, ಮುಂತಾದುವುಗಳನ್ನು ನನ್ನ ಅನುಭವದಲ್ಲಿ ಪುರುಷರಿಗಿಂತ ಸ್ತ್ರೀಯರು ಚೆನ್ನಾಗಿ ಮಾಡುತ್ತಾರೆ.

ಪ್ರ: ಕಲಾ ಪ್ರದರ್ಶನದಂತಹ ಸಂದರ್ಭಗಳಲ್ಲಿ ಸ್ತ್ರೀಯರು ವಿಶಿಷ್ಟವಾಗಿರುವ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆಯೆ ?

ಉ: ಇಲ್ಲ. ಪುರುಷ ಹಾಗು ಮಹಿಳಾ ಕಲಾವಿದರು ಎದುರಿಸುವ ಸಮಸ್ಯೆಗಳೆಲ್ಲಾ ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಒಂದೇ ಆಗಿದೆ. ಪ್ರಮುಖವಾಗಿ, ಆರ್ಥಿಕ ಸಮಸ್ಯೆಯನ್ನು ಅವರು ಎದುರಿಸಬೇಕಾಗುತ್ತದೆ.

ಕಮರ್ಶಿಯಲ್ ಆರ್ಟ್ ನಮಗೆ ಬರೋಲ್ಲ ಅನ್ನೋ ಭಾವ ಲೆಟ್ರಿಂಗ್ಸ್ ನಮಗೆ ಬರೋಲ್ಲ ಅನ್ನೋ ಭಾವನೆ ಹುಡುಗಿಯರಲ್ಲಿ ಸಾಮಾನ್ಯವಾಗಿ ಇರುತ್ತೆ, ಕಮರ್ಶಿಯಲ್‌ನಲ್ಲಿ ಅವರಿಗೆ ಅವಕಾಶವಿಲ್ಲದಿರುವುದರಿಂದ ಟೀಚಿಂಗ್‌ಗೆ ಹೆಚ್ಚು ಮಹಿಳೆಯರು ಹೋಗುತ್ತಿದ್ದಾರೆ

ಯಾವುದೇ ಕ್ಯಾಂಪ್‌ನಲ್ಲಿ ಮಹಿಳೆಯರಿಗೆ ಮೊದಲ ಪ್ರೋತ್ಸಾಹ, ಮಹಿಳೆಯರಿಗೆ ಮೊದಲ ಸ್ಥಾನ ಕೊಡಬೇಕು ಅನ್ನೊ ಮಟ್ಟದಲ್ಲಿ ಇದ್ರೂ ಕೂಡ ಪುರುಷರಿಗೆ ಯಾವ ರೀತಿ ಮೊದಲ ಸ್ಥಾನ ಕೊಡ್ತಾರೆ. ಆ ರೀತಿ ನನ್ನ ಅನುಭವದಲ್ಲಿ ಕೊಡಲ್ಲ. ಕೆಲವು ಕ್ಯಾಂಪ್‌ಗಳಿಗೆ ಲಲಿತ ಕಲಾ ಅಕಾಡೆಮಿ ಸೆಲೆಕ್ಟ್ ಮಾಡಿದಾಗ ಎಲ್ಲರನ್ನೂ ಮಾಡಿ ಆಮೇಲೆ ಒಂದಿಬ್ಬರು ಮಹಿಳೆಯರು ಇರಲಿ ಅನ್ನೊ ದೃಷ್ಟಿಯಲ್ಲಿ ಮಹಿಳೆಯರನ್ನು ಆಯ್ಕೆ ಮಾಡ್ತಾರೆ. ಅವರಿಗೆ ಸಾಮರ್ಥ್ಯ ಇದೆ. ಇವರನ್ನು ಮಾಡಿ ಕೊಳ್ಳಬಹುದು ಅಂತ ಇಲ್ಲ.

ಪ್ರ: ಈ ರೀತಿ ಆಯ್ಕೆ ಮಾಡಿಕೊಳ್ಳುವಾಗ ಮಹಿಳೆಯರನ್ನು ಇಷ್ಟು ಪುರುಷರನ್ನು ಇಷ್ಟು ಅಂತ ನಿಯಮಗಳಿಲ್ಲವೇ?

ಉ: ಯಾವ ರೀತಿ ಪ್ರಿನ್ಸಿಪಲ್ ಇಲ್ಲ. ಏಕೆಂದರೆ ಸದಸ್ಯರೆಲ್ಲಾ ಪುರುಷರೆ ಆದ್ದರಿಂದ ಅವರಿಗೆ ಬೇಕಾದ ಹೆಸರುಗಳನ್ನು ಸೂಚಿಸಿಯಾದ ಮೇಲೆ ಕೊನೆಗೆ ಜ್ಞಾಪಕ ಬರುತ್ತೆ. ಇಬ್ಬರು ಮೂವರು ಮಹಿಳೆಯರು ಇರಲಪ್ಪ ಅಂತ ನಿರ್ಧರಿಸುತ್ತಾರೆ. ಇದು ಅಲ್ಲೇ ನಡೆಯುತ್ತೆ ಅನ್ನೋದು ಫ್ಯಾಕ್ಟ್.

ಪ್ರ: ಸಮಾಜದ ಯಾವ ಕ್ಷೇತ್ರವನ್ನು ತೆಗೆದುಕೊಂಡರೂ ಪುರುಷರ ಪ್ರಾಧಾನ್ಯತೆ ಇರುವ ಹಾಗೆ ಚಿತ್ರಕಲೆಯಲ್ಲೂ ಅದು ಕಂಡುಬರುತ್ತದೆಯೇ? ಹಾಗಿದ್ದರೆ ಈ ಪ್ರಾಧಾನ್ಯತೆ ಯಾವ ಸ್ವರೂಪ ಮತ್ತು ಸನ್ನಿವೇಶಗಳಲ್ಲಿ ಕಂಡುಬರುತ್ತವೆ.

ಉ: ಪುರುಷರ ಡಾಮಿನೆನ್ಸ್ ಇದೆ. ಯಾಕೆಂದರೆ ಮಹಿಳಾ ಕಲಾವಿದರು ಹೆಚ್ಚಾಗಿ ಇಲ್ಲವೇ ಇಲ್ಲ ಅಲ್ಲವಾ? ಇಡೀ ಕರ್ನಾಟಕದಲ್ಲಿ ನೋಡ್ತಾ ಇದ್ರೆ ಪುರುಷ ಕಲಾವಿದರೆ ಪುನಃ ಪುನಃ ಕಲಾ ಪ್ರದರ್ಶನಗಳನ್ನು ಏರ್ಪಡಿಸುತ್ತಾರೆ. ಹೆಚ್ಚಾಗಿ ಮಹಿಳೆಯರಿಗೆ ಪ್ರತಿಭೆ ಇದ್ರು ಕೂಡ ಮನೆಯವರು ಮುಂದುವರಿಯಲು ಬಿಡೋಲ್ಲ. ಇದು ತುಂಬಾ ಖರ್ಚಿನದು, ಬೇಸಿಕ್ ತಡೆ ಇರುವುದು ಮನೆಯವರಿಂದ, ಎರಡನೆಯದು ಧೈರ್ಯ ಮಾಡಿ ಒಂದು ಎರಡು ಪ್ರದರ್ಶನಗಳನ್ನು ಮಾಡಿ ಸರ್ಕಾರದಿಂದ, ಸಮಾಜದಿಂದ ಪ್ರೋತ್ಸಾಹ ಸಿಕ್ಕಿ, ಒಂದೆರೆಡು ಪೈಂಟಿಂಗ್ ಮಾರಟವಾದ್ರೆ ಪರವಾಗಿಲ್ಲ. ಮೊದಲ ಬಾರಿ ಪ್ರದರ್ಶನ ಮಾಡಿದ್ರೆ, ನೋಡೋದಕ್ಕೂ ಬರೋಲ್ಲ. ಬಂದ್ರೂ ಕೂಡ, ನನ್ನ ಅನುಭವದಲ್ಲಿ ನೋಡೋದೆ ಇಲ್ಲ.

ಸಂಯುಕ್ತ ಕರ್ನಾಟಕ ಆಗ್ಲಿ, ಸರಿಯಾಗಿ ನೋಡ್ಲೆ ಇಲ್ಲ, ನನ್ನ ಜೊತೆ ಮಾತಾಡ್ದೇನೆ ಆಯಿಲ್ ಪೈಂಟಿಂಗ್ ಅಂತ ಬರೆದ್ರು, ಇನ್ನೂ ಬೆಳೀಬೇಕು, ಆದ್ರೂ ಪರವಾಗಿಲ್ಲ ಮಹಿಳಾ ಕಲಾವಿದೆ, ಸುಮ್ನೆ ಹೊಗಳಿದ ಹಾಗೂ ಇರಬೇಕು, ಸಮಾಧಾನವಾಗಿಯೂ ಇರ್ಬೇಕು, ಏನೋ ಬರೀಬೇಕು ಅನ್ನೊ ಶಾಸ್ತ್ರಕ್ಕೆ ಬರೆದ್ರು.

ಪ್ರ: ಇತ್ತೀಚೆಗೆ ಮಹಿಳೆಯರಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಸಿಗುತ್ತಿರುವ ಹಾಗೆ, ಕಲೆಯಲ್ಲಿ ತೊಡಗಿಸಿಕೊಳ್ಳಬೇಕೆಂದಿರುವ ಸ್ತ್ರೀಗೆ ಪ್ರೋತ್ಸಾಹ ಸಿಗುತ್ತಿದೆಯೆ?

ಉ: ಸಂಗೀತ ಕಲೀಲಿ ಅಂತ ಅನ್ನೋ ಭಾವನೆ ಇದೆಯೆ ಹೊರತು ಪೈಂಟಿಂಗ್ ಕಲೀಲಿ ಅನ್ನೋ ಭಾವನೆ ತಂದೆ ತಾಯಿಗಳಿಗಿಲ್ಲ. ಅ.ನ.ಕೃ. ಕಾದಂಬರಿ ಓದಿಬಿಟ್ಟು ಚಿತ್ರಕಲೆಗೆ ಹೋದ್ರೆ ಹುಡುಗಿಯರು ಕೆಟ್ಟು ಹೋಗ್ತಾರೆ ಅನ್ನೊ ಭಾವನೆ ಇತ್ತು. ಚಿತ್ರಕಲೆಗೆ ಬಂದವರೆಲ್ಲ ಹಾಳಾಗ್ತಾರೆ ಅಂತ ತಂದೆ ತಾಯಿಗಳು ಭಾವಿಸ್ತಾರೆ. ಆದ್ರೂ ಈಗೀಗ ಸ್ವಲ್ಪ ವಾತಾವರಣ ಬದಲಾಗಿದೆ. ನನ್ನ ಮಗಳು ಪೈಂಟಿಂಗ್ ಕಲೀಲಿ ಅನ್ನೋ ಅಭಿರುಚಿ ಶ್ರೀಮಂತರಲ್ಲಿ ಬರುತ್ತಿದೆ.

ಅಂದರೆ ಪುರುಷರ ಡಾಮಿನೆನ್ಸ್ ಇರುತ್ತೆ. ಇದು ನಮ್ಮ ಹಕ್ಕು ನಾವೇ ಮಾಡಬಲ್ಲೆವು ಹುಡುಗಿಯರಿಗೆ ಬರಲ್ಲ ಅನ್ನೋ ಒಂದು ಟ್ರೆಂಡ್ ಬೆಳೆಸುತ್ತಿದ್ದಾರೆ. ಇದನ್ನು ಬಲವಂತವಾಗಿ ಮತ್ತು ಮಾನಸಿಕವಾಗಿ ಮಹಿಳೆಯರು ತಲೆಯಲ್ಲಿ ತುಂಬಿ ಕೊಳ್ಳುತ್ತಿದ್ದಾರೆ.

ನಾನು ಮೊದಲ ಬಾರಿಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ನನ್ನ ಕಲಾ ಪ್ರದರ್ಶನವನ್ನು ಮಾಡ್ದೆ. ಬಂದವರು ಅದು ಇದು ಮಾತಾಡಿಕೊಂಡು ಟೀ ಕುಡಿದು ಹೋದವರು ವಿಮರ್ಶೆ ಬರದ್ರು, ದಟ್ಟವಾದ ರೇಖೆಗಳು ತೈಲ ವರ್ಣದ ಚಿತ್ರವೆಂದು. ನಾನು ರಚಿಸಿದ್ದು ಇಂಡಿಯನ್ ಇಂಕ್ ಹಾಗೂ ಪೋಸ್ಟರ್ ಕಲರ್ ಉಪಯೋಗಿಸಿ ಎಕ್ಸ್‌ಪೆರಿಮೆಂಟ್ ಮಾಡಿ ನನ್ನ ಸ್ವಂತ ಅನಿಸಿಕೆಯನ್ನು ಪೈಯಿಂಟ್ ಮಾಡಿದ್ದೆ, ಅದನ್ನು ನೋಡಲೂ ಇಲ್ಲ. ಸರಿಯಾಗಿ ಅಭ್ಯಾಸ ಮಾಡಿ, ನನ್ನ ಜೊತೆ ಚರ್ಚೆ ಮಾಡಿ, ಪ್ರಾಮಾಣಿಕವಾಗಿ, ಒಳ್ಳೆ ವಿಮರ್ಶೆ ಬರೆದವರು ಒಬ್ಬರೆ, ಕೃಷ್ಣಮೂರ್ತಿ ಅನ್ನುವ ವಿಮರ್ಶಕರೊಬ್ಬರೆ. ಪ್ರಜಾವಾಣಿಯಾಗ್ಲಿ, ಹೆರಾಲ್ಡ್ ಆಗ್ಲಿ, ಹೆಂಡ್ತಿ ಮಾಡಿದ್ದು ಮಗಳು ಮಾಡಿದ್ದು ಕೆಲವು ಸಾರಿ ಕಾಪಿ ಮಾಡಿಯಾದ್ರು ತೋರಿಸ್ತಾರೆ, ಇತ್ತೀಚೆಗೆ ತೋರಿಕೆಗೋಸ್ಕರ ಅಂದ್ರು ಇಂತ ಒಲವು ಬರ್‍ತಾ ಇದೆ.

ಪ್ರ: ಚಿತ್ರಕಲಾ ಮಾಧ್ಯಮದಲ್ಲಿ ಸ್ತ್ರೀ ಸಂವೇದನೆಯನ್ನು ಕಾಣಲು ಸಾಧ್ಯವೆ? ಸ್ತ್ರೀ ಸಂವೇದನೆಯನ್ನು ಪುರುಷ, ಸ್ತ್ರೀಯರಿಬ್ಬರೂ ಹಿಡಿದಿಡಬಹುದೆ? ಅಥವಾ ಸ್ತ್ರೀಯೊಬ್ಬಳಿಗೆ ಮಾತ್ರ ಸಾಧ್ಯವೆ?

ಉ: ಸ್ತ್ರೀ ಸಂವೇದನೆಯನ್ನು ಚಿತ್ರ ಮಾಧ್ಯಮದಲ್ಲಿ ಅಭಿವ್ಯಕ್ತಿಸಲು ಹೆಣ್ಣಿಗೆ ಮಾತ್ರ ಸಾಧ್ಯವಾಗ್ತದೆ. ನನ್ನ ಮೊದಲ ಕಲಾ ಪ್ರದರ್ಶನದಲ್ಲಿ ನನಗೂ ಗೊತ್ತಿಲ್ಲದೆ ಹೆಣ್ಣಿನ ಕೆಲವು ಮೂಡ್ಸ್‌ಗಳನ್ನು ಅಭಿವ್ಯಕ್ತಿ ಮಾಡಿದ್ದೆ ಅಂತ ಪೈಂಟಿಂಗ್ ಮಾಡಿಯಾದ ಮೇಲೆ ಗೊತ್ತಾಯ್ತು. ಡಿಫರೆಂಟ್ ಕ್ಯಾರೆಕ್ಟರ್ ಆಫ್ ವುಮೆನ್

ಅಂತ ನನಗೆ ಅನ್ನಿಸಿತ್ತು. ತುಂಬಾ ಪ್ರಾಬ್ಲಮ್ ಆಗಿ ತಲೆಕೆಟ್ಟಾಗ ಏನು ಮಾಡಲಾರದಷ್ಟು, ಹೇಗೆ ಎಕ್ಸ್ ಪ್ರೆಸ್ ಮಾಡೋದು ಅಂತ ಗೊತ್ತಿಲ್ಲದೆ, ಎಲ್ಲಾದ್ರು ಕಿತ್ತುಕೊಂಡು ಓಡಬೇಕು ಅನ್ನೋ ಭಾವನೆ ನನ್ನ ಪೈಂಟಿಂಗ್‌ನಲ್ಲಿದೆ. ಕೆಲವು ಸಾರಿ ಸಮಸ್ಯೆಗಳನ್ನು ಸಮಾಜದಲ್ಲಿ ನೋಡ್ತೀವಿ. ವೈಯಾಲಿ ಕಾವಲ್‌ನಲ್ಲಿ ಪಾಲಿಶ್ ಕುಡಿದು ರಾಶಿರಾಶಿಗಟ್ಲೆ ಜನ ಸತ್ರು, ಅದನ್ನು ನೋಡಿ ಇವು ಮನುಷ್ಯರೋ, ಕಸದ ರಾಶಿಯೋ ಅಂತ ಅನಿಸಿಬಿಡ್ತು. ತುಂಬಾ ದುಃಖ ಆಯ್ತು. ಅದನ್ನೂ ಡ್ರಾಯಿಂಗ್ಸ್ ಮಾಡ್ದೆ. ಅಂದ್ರೆ ಗಂಡಸೇನೋ ತನ್ನ ಸುಖಕ್ಕೋಸ್ಕರ ಕುಡ್ದು, ಮಜಾ ಮಾಡ್ತಾನೆ. ಅಷ್ಟೇ ಕಷ್ಟಾನು ಪಡ್ತಾನೆ ಸಂಜೆವರೆಗು. ಆದ್ರೆ ತನ್ನ ಅವಲಂಬಿಸಿದವರ ಬಗ್ಗೆ ಯೋಚನೆಮಾಡ್ದೆ ಸತ್ಹೋಗಿಬಿಟ್ಟ. ಇಲ್ಲಿ ಅನುಭವಿಸುವವರು ಹೆಂಗಸರು. ತಾಯಿಯಾಗಿರಬಹುದು, ತಂಗಿಯಾಗಿರಬಹುದು, ಹೆಂಡತಿಯಾಗಿರಬಬಹುದು. ಹೀಗೆ ಕುಡಿತದ ವಿಷಯದ ಮೇಲೆ ಪೈಂಟಿಂಗ್ಸ್ ಮಾಡ್ದೆ. ಹೀಗೆ ಹಲವಾರು ಸನ್ನಿವೇಶಗಳಲ್ಲಿ ಮಹಿಳೆ ಯಾವ ರೀತಿ ಶೋಷಣೆಗೆ ಒಳಗಾಗ್ತಾಳೆ ಅನ್ನೋದ್ರ ಮೇಲೆ ಕೆಲವು ಡ್ರಾಯಿಂಗ್ಸ್ ಹಾಗೂ ಪೈಂಟಿಂಗ್ಸ್ ಮಾಡಿದೀನಿ.

ಪ್ರ: ಈ ದೃಷ್ಟಿಕೋನದಲ್ಲಿ ಬೇರೆ ವಿಷಯಗಳನ್ನೂ ಚಿತ್ರಿಸಿದ್ದೀರಾ?

ಉ: ಈ ದೃಷ್ಟಿಕೋನದಲ್ಲಿ ಅಂದ್ರೆ ಸ್ತ್ರೀಯ ಹಲವಾರು ಮೂಡ್ಸ್‌ಗಳನ್ನು ಚಿತ್ರಿಸಿದ್ದೆ. ಆಮೇಲೆ ಮೇಸ್ಟ್ರು (ಹಡಪದ್) ಅದನ್ನು ರೆಕಗ್ನೈಸ್ ಮಾಡಿದರು. ಇನ್ನೊಂದು ನಿರ್ದಶನ ಒಬ್ಬ ಟೈಪಿಸ್ಟ್ ಆಕೆ ತುಂಬಾ ಸುಂದರವಾಗಿದ್ದಂತೆ ಗ್ರಾಜುಯೇಟ್, ತುಂಬ ಶ್ರೀಮಂತಳೂ ಕೂಡ, ಗಂಡನಿಂದ, ಅಥವಾ ಅತ್ತೆಯಿಂದ ಏನು ಮೋಸವಾಯ್ತೋ ತನಗೆ ತಾನೇ ಮಾತನಾಡಿಕೊಳ್ಳುವುದು, ಬೀದಿ ತುಂಬಾ ನನಗೆ ಯಾರು ಸಾಲ ಕೊಟ್ಟಿಲ್ಲ. ನಾನು ಯಾರಿಗೂ ಸಾಲ ಇಸ್‌ಕೊಟ್ಟಿಲ್ಲ ಅಂತ ಕೂಗಾಡುತ್ತಿದ್ಲು. ನನಗೆ ತುಂಬಾ ದುಃಖ ಆಯ್ತು. ಆದ್ರೆ ಗಂಡ ಅವಳು ಸತ್ರೆ ಅವಳ ನಿವೃತ್ತಿ ವೇತನ ಇನ್ಶ್ಯೂರೆನ್ಸ್ ಬರುತ್ತದಲ್ಲ ಅಂತ ಅವಳನ್ನು ಸಹಿಸಿ ಕೊಂಡಿದ್ದ.

ಅವಳನ್ನು ನೋಡಿ ನನಗೆ ತುಂಬಾ ಫೀಲ್ ಆಯ್ತು. ಅವಳ ಹುಚ್ಚುತನದ ಗುಣವನ್ನು, ಅವಳ ಕಣ್ಣಲ್ಲಿದ್ದ ಹತಾಶೆ ಅದನ್ನು ಪೈಯಿಂಟಿಗ್‌ನಲ್ಲಿ ಅಭಿವ್ಯಕ್ತಿ ಗೊಳಿಸಿದೆ.

ಇನ್ನೊಂದು ಪೈಯಿಂಟಿಂಗ್ ಸ್ಟೆಪ್ಸ್ ಇದು ಹಳ್ಳಿಯ ವಾತಾವರಣ. ಸಮಾಜಗಲ್ಲಿ ಹಳ್ಳಿಯಾಗ್ಲಿ ಪಟ್ಟಣದಲ್ಲಾಗ್ಲಿ ಹೆಣ್ಣು ಪ್ರತಿ ಹೆಜ್ಜೆಯಲ್ಲೂ ಹೇಗೆ ಸಮಸ್ಯೆಗಳನ್ನು ಎದುರಿಸುತ್ತಾಳೆ, ಸಮಸ್ಯೆಗಳನ್ನು ಬಗೆಹರಿಸಲೇಬೇಕು, ಎಚ್ಚರಿಕೆಯಿಂದ ಹೆಜ್ಜೆಗಳನ್ನು ಇಡಬೇಕಾಗುತ್ತೆ. ಸ್ಕಿಪಿಂಗ್ ಉದಾಹರಣೆ ತೆಗೆದುಕೊಂಡಾಗ ಎಚ್ಚರಿಕೆಯಿಂದ ಹೆಜ್ಜೆಗಳನ್ನು ಇಡಬೇಕಾಗುತ್ತೆ, ಹಾಗೆ ಸ್ವಲ್ಪ ನಿರ್ಲಕ್ಷ್ಯದಿಂದ ಹೆಜ್ಜೆ ಇಟ್ರು ನಾವೇ ಬೀಳಬೇಕಾಗುತ್ತೆ. ಅದಕ್ಕೆ ಜೀವನದಲ್ಲಿ ಪ್ರತಿ ಹೆಜ್ಜೆ ಇಡುವಾಗ ಎಚ್ಚರಿಕೆಯಿಂದ ಇಡಬೇಕು. ಇಲ್ಲದಿದ್ರೆ ಎಷ್ಟು ಅನಾಹುತಗಳಾಗುತ್ತೆ ಅನ್ನೋದನ್ನ ಸಾಂಕೇತಿಕವಾಗಿ ಚಿತ್ರಿಸಿದ್ದೇನೆ.

ಪ್ರ: ಕಲೆಯಲ್ಲಿ ಪುರುಷರಿಂದ ರಚಿತವಾದವು, ಸ್ತ್ರೀಯರಿಂದ ರಚಿತವಾದ ಕಲೆ ಎಂದು ವಿಂಗಡಿಸಬಹುದೆ?

ಉ: ಚಿತ್ರಕಲೆಯಲ್ಲಿ ಅಂಥ ವಿಭಾಗ ಇಲ್ಲ. ವಸ್ತುವನ್ನು ಆಯ್ಕೆ ಮಾಡಿಕೊಳ್ಳುವಾಗ ಪುರುಷ ಕಲಾವಿದರು ಒಟ್ಟಾಗಿ ಸಮಾಜವನ್ನು ಟೀಕೆ ಮಾಡಿ ಕೆಲವು ಚಿತ್ರಗಳನ್ನು ರಚಿಸುತ್ತಾರೆ. ಡಿ. ಪ್ರಭಾ ಆಗ್ಲಿ, ಶೇರ್‌ಗಿಲ್ ಆಗ್ಲಿ ಹೆಚ್ಚಾಗಿ ಅವರ ಬಗ್ಗೆ ಯೋಚನೆ ಮಾಡಿ ರಚಿಸಿದ್ದಾರೆ. ಸ್ತ್ರೀ ಕಲಾವಿದರು ಸ್ತ್ರೀಯರ ವಿಷಯಗಳನ್ನು ಕಂಪೋಜಿಷನ ರೂಪದಲ್ಲಾಗಲೀ ಅಥವಾ ಪೋರ್ಟ್‌ರೈಟ್ಸ್‌ಗಳ ರೂಪದಲ್ಲಾಗಲಿ ಚಿತ್ರಿಸಿದ್ದೇನೆ. ಈ ರೀತಿ ವಿಷಯಗಳ ಹಿನ್ನೆಲೆಯಲ್ಲಿ ವಿಭಾಗಿಸಬಹುದು. ಇಲ್ಲಿವರೆಗೂ ಸ್ತ್ರೀ ಕಲಾವಿದರು ಅವರಿಗೆ ಸಂಬಂಧಪಟ್ಟಿರುವುದನ್ನೂ ಅಭಿವ್ಯಕ್ತಿಸುತ್ತಾ ಬಂದಿದ್ದಾರೆ.

ಗ್ರಾಫಿಕ್ಸ್, ಶಿಲೆಗಳನ್ನು ಕೆತ್ತುವುದರಲ್ಲೂ ಈ ತರದ ಪ್ರಶ್ನೆಗಳಿರುತ್ತೆ. ಶಿಲೆಗಳನ್ನೂ ಕೆತ್ತುವ ಕೆಲಸಕ್ಕೆ ಹೆಂಗಸರು ಹೋಗ್ತಾ ಇರ್ಲಿಲ್ಲ. ಈಗ ಶ್ರೀಯುತ ವಾದಿರಾಜ್ ವಿದ್ಯಾರ್ಥಿನಿ ಕನಕ ಇಡೀ ಕರ್ನಾಟಕದಲ್ಲಿ ಸಾಂಪ್ರದಾಯಿಕ ಶಿಲೆಗಳನ್ನೂ ಕೆತ್ತುವವರು ಇವರೊಬ್ಬರೆ. ಎಷ್ಟೋ ಜನ ನೀನು ಮಾಡ್ತೀಯಲ್ಲ ಅದನ್ನು ದೇವಸ್ಥಾನಕ್ಕೆ ಇಡೋದಿಲ್ಲ ಅನ್ನೋ ಮಟ್ಟಕ್ಕೆ ಅವರು ಟೀಕೆಗಳನ್ನು ಎದುರಿಸಿದ್ದಾರೆ. ಸಂಪ್ರದಾಯ ವಿರೋಧಿಸಿಕೊಂಡು ಅದನ್ನು ಮಾಡ್ತಾ ಇರೋರು ಅವರೊಬ್ಬರೆ.

ಇನ್ನು ಯಾರು ಇಲ್ಲ, ವಿಧಿ ಇಲ್ಲ, ಅಂತ ವಾಸುದೇವ್ ಹೇಳ್ದಾಗ ಅದೂ ಅರ್ಧ ಮನಸ್ಸಿನಿಂದ ಒಪ್ಪಿಕೊಳ್ತಾರೆ. ಮನಃ ಪೂರ್ವಕವಾಗಿಯಲ್ಲ; ಮಹಿಳೆಯರು ಇದನ್ನು ಮುಟ್ಟಬಾರ್ದು, ನಿಷೇಧ, ಈಕೆ ಮಾಡ್ತಾಳಲ್ಲ ಅಂತ ಒಂದು ರೀತಿ ಶಾಕ್ ಎಕ್ಸ್‌ಪ್ರೆಸ್ ಮಾಡ್ತಾರೆ,

ಪ್ರ: ಸ್ತ್ರೀಯರ ಕಲಾಕೃತಿಗಳನ್ನು ಅಳೆಯಲು ಪ್ರತ್ಯೇಕವಾದ ಮಾನದಂಡಗಳ ಅಗತ್ಯವಿದೆಯೇ ?

ಉ: ಅಂತ ಮಾನದಂಡಗಳೇನೂ ಇಲ್ಲ. ನಾವು ಪೈಯಿಂಟಿಂಗ್‌ನಲ್ಲಿ ಹೇಳೋದು ಫಾರ್ಮ್ ಮುಖಾಂತರ. ಅಂದ್ರೆ ನಮ್ಮ ಸ್ವಂತಿಕೆಯನ್ನು ನಾವು ಬೆಳೆಸಿಕೊಂಡು ಬರ್ತೇವೆ.

ಪ್ರ: ಸ್ತ್ರೀ ಕಲಾವಿದರು ಪುರುಷ ಕಲಾವಿದರೊಂದಿಗೆ ಗುಣಾತ್ಮಕವಾದ ಸ್ಪರ್ಧೆ ನಡೆಸಬೇಕಾಗಿದೆಯೆ ? ಅಥವಾ ಅವರಿಗೆ ಸಾಮಾಜಿಕ ಕಾರಣಗಳಿಂದಾಗಿ ರಿಯಾಯಿತಿಯ ಅಗತ್ಯವಿದೆಯೆ ?

ಉ: ಮಹಿಳಾ ಸಾಹಿತಿಗಳಿಗೆ ಹೋಲಿಸಿದರೆ, ಸ್ತ್ರೀ ಕಲಾವಿದರು ತುಂಬಾ ಕಡಿಮೆ. ಒಂದು ಗುಂಪು ಇತ್ತು ಅಂದ್ರೆ ಆ ತರದ ಪರಿಣಾಮವನ್ನು ನಿರೀಕ್ಷೆ ಮಾಡಲು ಸಾಧ್ಯ. ಸ್ತ್ರೀ ಕಲಾವಿದರು ಕೇವಲ ಬೆರಳೆಣಿಕೆಯಷ್ಟು. ಮೂರು ನಾಲ್ಕು ಜನ ಮಾತ್ರ. ಸ್ತ್ರೀ ಕಲಾವಿದರು ಮದುವೆ ಆಗಿ ಸೆಟಲ್ ಆಯ್ತು ಅಂದ್ರೆ ಬ್ರಷ್ ಸಹ ಮುಟ್ಟೋದಿಲ್ಲ. ಸ್ತ್ರೀ ಕಲಾವಿದರ ಒಂದು ಗುಂಪು ಇತ್ತು ಅಂದ್ರೆ ಆ ತರದ ಒಂದು ಪರಿಣಾಮ ನಿರೀಕ್ಷೆ ಮಾಡಬಹುದು. ಹಾಗಿದ್ದಾಗ, ಪುರುಷ ಕಲಾವಿದರು, ಸ್ತ್ರೀ ಕಲಾವಿದರ ನಡುವಿನ ವ್ಯತ್ಯಾಸ ಗೊತ್ತಾಗುತ್ತೆ. ಜೊತೆಗೆ ಹೋಲಿಕೇನೂ ಮಾಡಬಹುದು. ಇದಕ್ಕೆ ಮುಖ್ಯ ಕಾರಣ, ಹುಡುಗಿಯರು ಆಸಕ್ತಿ ಕಳೆದುಕೊಳ್ಳುತ್ತಾರೆ. ಪೋಷಕರು ನಿರಾಸಕ್ತಿ ತೋರಿಸ್ತಾರೆ. ಹುಡುಗಿಯರು ಸೋಮಾರಿಗಳಾಗ್ತಾರೆ. ಇಲ್ಲಿ ರಿಯಾಯಿತಿಯ ಪ್ರಶ್ನೆಯೇ ಬರುವುದಿಲ್ಲ.

ನಾನು ಪೈಂಟಿಂಗ್ ಶುರುಮಾಡಿದಾಗ ಹುಡುಗಿಯರು ತುಂಬಾ ಸೀರಿಯಸ್ ಆಗಿ ತೆಗೆದುಕೊಂಡ್ರು. ಇವತ್ತಿಗೂ ಆ ಗಂಭೀರತೆ ಉಳಿದುಕೊಂಡಿದ್ರೆ ಒಂದು ದೊಡ್ಡ ಗುಂಪಾಗಿರುತ್ತಿತ್ತು. ಕೌಟುಂಬಿಕ ಚೌಕಟ್ಟು ಸಹ ಇಂತಹ ಆಸಕ್ತಿಯನ್ನು ಕಡಿದು ಹಾಕುತ್ತದೆ. ಕೆಲಸಕ್ಕೆ ಹೋಗುವುದು ಅಡಿಗೆ ಮಾಡುವುದು ಇವುಗಳ ನಡುವೆ ಸಮಯ ಇರೋದೆ ಇಲ್ಲ. ಮಾನಸಿಕವಾಗಿ ಸುಸ್ತಾದಾಗ ಏನೂ ಮಾಡೋದಕ್ಕೆ ಆಗೋದಿಲ್ಲ. ಶಿಕ್ಷಣ ವೃತ್ತಿಯನ್ನು ಕೆಲವು ಸ್ತ್ರೀಯರು ಸರಿಯಾಗಿ ಮಾಡುತ್ತಿಲ್ಲ.

ಪ್ರ: ಇತ್ತೀಚೆಗೆ ಕಂಡು ಬರುತ್ತಿರುವ ಮಹಿಳಾ ಜಾಗೃತಿ ಕಲಾ ಪ್ರಪಂಚದ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ?

ಉ: ನಮ್ಮ ಕರ್ನಾಟಕದಲ್ಲಿ ಅಂತ ಪರಿಣಾಮ ಬೀರಿಲ್ಲವಾದರೂ ಒಂದು ಪ್ರಜ್ಞೆ ಕಂಡು ಬರುತ್ತಿದೆ. ಇತ್ತೀಚೆಗೆ ಕರ್ನಾಟಕದಲ್ಲಿ ತೆಗೆದುಕೊಂಡಾಗ ಮಹಿಳಾ ದಿನದ ಅಂಗವಾಗಿ ವಿಮೋಚನಾದವರು ಸ್ತ್ರೀ ಕಲಾವಿದರ ಕಲಾ ಪ್ರದರ್ಶನವನ್ನು ವ್ಯವಸ್ಥಿತವಾಗಿ ಮಾಡದೆ ಇದ್ರೂ ಕೂಡ ಒಂದು ಶಾಸ್ತ್ರ ಮಾಡ್ತಿದ್ದಾರೆ. ಅದನ್ನೆ ಮಹಿಳೆಯರು ಒಂದು ಯೋಜನೆ ಮಾಡಿಕೊಂಡು ಅವರ ಅನಿಸಿಕೆಗಳಿಗೆ ಅವಕಾಶ ಕೊಟ್ಟು ಒಬ್ಬ ಕಲಾವಿದೆ, ಒಂದೈದು ಕ್ಯಾರ್ಯಾಗಾರ‍್ಗಳನ್ನು ಮಾಡಿದಾಗ ಒಳ್ಳೆ ಕಲಾ ಪ್ರದರ್ಶನ ಮಾಡಲಿಕ್ಕೆ ಅಣಿಯಾಗುತ್ತೆ. ಮಹಿಳಾ ದಿನ ಅಂತಂದಾಗ ಮಹಿಳೆಯರ ಸಮಸ್ಯೆಗಳನ್ನು ಕುರಿತು ಯೋಚನೆ ಮಾಡಲು ಅವಕಾಶ ಮಾಡಿಕೊಡುತ್ತೆ. ದೆಹಲಿಯಲ್ಲಿ ಸ್ತ್ರೀ ಕಲಾವಿದರೆಲ್ಲಾ ಸೇರಿಕೊಂಡು ಬಾಂಬೆ ಮತ್ತು ದೆಹಲಿಯಲ್ಲಿ ಒಂದು ಕಲಾ ಪ್ರದರ್ಶನವನ್ನು ಮಾಡಿದ್ರು ಈ ರೀತಿ ಒಂದು ಟ್ರೆಂಡ್ ಬರ್ತಾ ಇದೆ.

ಪ್ರ: ಮಹಿಳಾ ಚಳುವಳಿ ಕಲಾ ಪ್ರಪಂಚದಲ್ಲಿ ವಸ್ತುವನ್ನು ಆಯ್ಕೆ ಮಾಡಿಕೊಳ್ಳುವ ಹಂತದಲ್ಲೇನಾದರೂ ಗಂಭೀರ ಪರಿಣಾಮ ಬೀರಿದೆಯೆ ?

ಉ: ಅಂತ ಸ್ಫೂರ್ತಿದಾಯಕವಾದ ಗಂಭೀರ ಪರಿಣಾಮ ಬೀರಿಲ್ಲ. ಇತ್ತೀಚೆಗೆ ಅಂತಹ ಪ್ರಯತ್ನಗಳನ್ನು ನೋಡಬಹುದು. ಹಾಗೆ ನೋಡಿದರೆ ಮಾಡ್ರ್ನ್ ಮೂವ್‌ಮೆಂಟ್‌ಗೆ ಅಡಿಪಾಯ ಹಾಕಿದವರು ಅಮೃತಾ ಶೇರ್‌ಗಿಲ್ ಅಂತ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅವಳೊಬ್ಬ ಸ್ತ್ರೀ ಕಲಾವಿದೆ ಅಂತ ಹೆಮ್ಮೆಯಿಂದ ಹೇಳಿ

ಸ್ತ್ರೀ ಸಂವೇದನೆಯನ್ನು ಚಿತ್ರಮಾಧ್ಯಮವನ್ನು ಅಭಿವ್ಯಕ್ತಿಸಲು ಹೆಣ್ಣಿಗೆ ಮಾತ್ರ ಸಾಧ್ಯವಾಗುತ್ತದೆ. ನನ್ನ ಮೊದಲ ಕಲಾ ಪ್ರದರ್ಶನದಲ್ಲಿ ನನಗೂ ಗೊತ್ತಿಲ್ಲವೆ. ಹೆಣ್ಣಿನ ಕೆಲವು ಮೂಡ್ಸ್‌ಗಳನ್ನು ಅಭಿವ್ಯಕ್ತಿ ಮಾಡಿದೆ.

ಕೊಳ್ಳಬಹುದು. ಒಂದು ಹೊಸ ಟ್ರೆಂಡ್‌ನ್ನು ಹುಟ್ಟು ಹಾಕಿದಳು ಆಕೆ. ಅವಳನ್ನು ಮದರ್ ಆಫ್ ಮಾಡ್ರನ್ ಆರ್ಟ್ ಅಂತಲೇ ಗುರುತಿಸಲಾಗುತ್ತದೆ.

ಪ್ರ: ಒಬ್ಬ ಸ್ತ್ರೀಕಲಾವಿದೆಗೂ ಮತ್ತು ಮಹಿಳಾ ಸಂಘಟನೆಗಳಿಗೂ ಸಂಬಂಧ ಇರುವುದು ಅಗತ್ಯವೇ ಇದ್ದರೆ ಯಾವ ಸ್ವರೂಪದಲ್ಲಿ?

ಉ: ಸಂಬಂಧಗಳು ಬೇಕು ಅಂತ ಅನಿಸುತ್ತೆ. ಸ್ತ್ರೀವಿದ್ಯಾವಂತೆಯಾಗಿದ್ರೂ ಅವಳ ಸ್ಥಾನ ಮಾನ ಏನು ಅಂತ ಅವಳಿಗೆ ಗೊತ್ತಿಲ್ಲ. ಸ್ತ್ರೀಯರಲ್ಲಿ ಅರಿವು ಮೂಡಿಸಲು ಸಂಘ - ಸಂಸ್ಥೆಗಳ ಅಗತ್ಯವಿದೆ. ನಾನು ವಿಮೋಚನ ಅಚಲ ಮಾನಸ ಮೊದಲಾದ ಗುಂಪುಗಳೊಂದಿಗೆ ನನ್ನ ಬಿಡುವಿನ ಸಮಯದಲ್ಲಿ ಮುಖಪುಟ ಮಾಡಿಕೊಡುವುದು. ಚಂದಾ ಸಂಗ್ರಹಿಸುವುದು ಮುಂತಾದುವುಗಳನ್ನು ಮಾಡಿಕೊಡ್ತೀವಿ.

ನಾನು ಪೈಯಿಂಟಿಂಗ್ ಶುರು ಮಾಡಿದಾಗ ಹುಡುಗಿಯರು ತುಂಬಾ ಸೀರಿಯಸ್ ಆಗಿ ತೆಗೆದುಕೊಂಡರು. ಇವತ್ತಿಗೂ ಆ ಗಂಭೀರತೆ ಉಳಿದುಕೊಂಡಿದ್ರೆ, ಒಂದು ದೊಡ್ಡ ಗುಂಪಾಗಿರುತ್ತಿತ್ತು. ಕೌಟುಂಬಿಕ ಚೌಕಟ್ಟು ಸಹ ಇಂತಹ ಆಸಕ್ತಿಯನ್ನು ಕಡಿದುಹಾಕುತ್ತದೆ. ಕೆಲಸಕ್ಕೆ ಹೋಗೋದು, ಅಡಿಗೆ ಮಾಡುವುದು ಇವುಗಳ ನಡುವೆ ಸಮಯ ಇರೋದೆ ಇಲ್ಲ. ಮಾನಸಿಕವಾಗಿ ಸುಸ್ತಾದಾಗ ಏನೊ ಮಾಡೋದಿಕ್ಕೆ ಆಗೋದಿಲ್ಲ.

ಪ್ರ: ಕಲಾ ಮಾಧ್ಯಮವನ್ನು ತಮ್ಮ ವ್ಯಕ್ತಿತ್ವದ ಅಭಿವ್ಯಕ್ತಿಗೆ ಆಯ್ಕೆ ಮಾಡಿಕೊಳ್ಳ ಬಯಸುವ ವಿದ್ಯಾರ್ಥಿನಿಯರಿಗೆ ನಿಮ್ಮ ಸಲಹೆ?

ಉ: ಅವರ ಸ್ವಂತ ಅನಿಸಿಕೆಗಳನ್ನು ವ್ಯಕ್ತಪಡಿಸಲು ಹೆಚ್ಚು ಹೆಚ್ಚು ಅವಕಾಶಗಳನ್ನು ಒದಗಿಸಿಕೊಡುವುದು ನಮ್ಮ ಮೊದಲ ಕರ್ತವ್ಯ. ವಿದ್ಯಾಭ್ಯಾಸ ಅಂದ್ರೆ ವಿದ್ಯಾರ್ಥಿಗಳನ್ನು ಪರಿಪೂರ್ಣತೆಯ ಕಡೆ ಒಯ್ಯೋ ಒಂದು ಸಲಕರಣೆ. ಸ್ತ್ರೀಯರು ತಮ್ಮ ಅನಿಸಿಕೆಗಳನ್ನು ಧೈರ್ಯವಾಗಿ ಅಭಿವ್ಯಕ್ತಿಸಬೇಕು. ಇಂತಹ ಅಭಿವ್ಯಕ್ತಿ ಸಾಹಿತ್ಯದಲ್ಲಿ ಮತ್ತು ಕಲೆಯಲ್ಲಿ ಹೆಚ್ಚು ಸಾಧ್ಯವಾಗುತ್ತದೆ.

(ಸಂದರ್ಶನದಿಂದ ಆಯ್ದ ಭಾಗಗಳು.

ಜೀವಂತದಹನ

ತಾಯಿಯ ಒತ್ತಾಯಕ್ಕೆ
ತಾಳಿಕಟ್ಟಿ.
ಮುಖವೆತ್ತಿ ನೋಡದೆ
ಮಾತಾಡದೆ

ಜೀವನ ಸವೆಸಿದ್ದು
ಯಾರ ಪ್ರೀತಿಗಾಗಿ?
ಯಾವ ಕರ್ಮಕ್ಕಾಗಿ?

ಮಾತೆಯವಾಗ್ದಾನ
ಅಲ್ಲ ಆಕೆಗೆ

ಅಭಯದಾನ
ಆಕೆಗದು ಜರ್ಝರಿತ ಜೀವನ
ಅದಲ್ಲ ನಿಜ ಜೀವದಾನ
ಅಲ್ಲ – ಅಲ್ಲ – ಅದು ಕನ್ಯಾದಾನ
ಆಗಿಹುದವಳ ಜೀವಂತದಹನ

ಆದರೂ

ಪತಿಯ ಪ್ರತಿ ಬಿಂಬದಲಿ
ದೇವನ ಕಂಡಿಹಳಂತೆ
ಆ ಭೂದೇವಿ ಊರ್ಮಿಳೆ

ಈಗವಳ ಬಾಳು
ಬರಿ ಗೋಳುಗೋಳೆ
ಹೊರಟು ಹೋಗಿಹುದವಳ
ಮುಖದಕಳೆ
ಉಳಿದಿಹುದೆಲ್ಲ ಬರೀ
ಮನೋವೇದನೆಯ ಕೊಳೆ
ಕಳೆ ಹೋಗಿ ಬರುವುದೇ ಬೆಳೆ?
ಕೊಳೆ ಹರಿಸಲೆಂದು ಬರುವುದೇ ಮಳೆ?
ಇವಳೆ ತಾನೆ ಭೂದೇವಿ ಇಳೆ
ಆಗಬಲ್ಲದೇ ಅನಾವೃಷ್ಟಿಯಲಿ ಮಳೆ
ಎಂಬ ಅನಿಸಿಕೆ ಬರೀ ಸುಳ್ಳು?

ಮುಂಗಾರು ಮೋಡ
ತಾ ಮುಂಸಾಗಿಹುದು
ದೂರಕೆ ಬಲುದೂರಕೆ
ಹಿಂದಿರುಗಿ ಬರಲಾರದ ಜಾಗಕ್ಕೆ!!

ಕಬಿನಿ ಹೇಮಾಶ್ರೀ.

ಟೆನ್ನಿಸ್ ಲೋಕದ ಉಜ್ವಲತಾರೆ: ಸ್ಟೆಫಿ ಗ್ರಾಫ್

ಸೋಲು ಗೆಲುವಿನ ಮೆಟ್ಟಲು ಎಂಬುದನ್ನು ನಾವು ಸ್ಟೆಫಿಯಿಂದ ಕಲಿಯಬೇಕು. ಫ್ರೆಂಚ್ ಓಪನ್‌ನಲ್ಲಿ ಸ್ಯಾಂಚೆಸ್‌ಳಂತಹ ಎಳಸು ಹುಡುಗಿಯ ಕೈಯಲ್ಲಿ ಸೋತರು, ಎದೆಗುಂದದೆ ಉತ್ತಮಕ್ರೀಡಾಮನೋಭಾವ ಪ್ರದರ್ಶಿಸಿ, ವಿಂಬಲ್ಡನ್‌ಗೆ ಬಂದಾಗ ಸ್ಟೆಫಿಯ ಗೆಲುವಿನ ಬಗ್ಗೆ ಅನುಮಾನದ ಬುಗ್ಗೆಗಳೆದ್ದಿದ್ದವು. ಸ್ಟೆಫಿ ಅದಕ್ಕೆಲ್ಲ ಸ್ಪಷ್ಟವಾದ ಉತ್ತರ ನೀಡಿದಳು. ಮಾರ್ಟಿನಾ, ಕ್ರಿಸ್‌ಳಂತಹ ಅನುಭವಿ ಆಟಗಾರ್ತಿಯರೆದುರು ಸೆಣಸಿ ಮತ್ತೊಮ್ಮೆ ವಿಂಬಲ್ಡನ್ ಮಹಿಳಾ ವಿಭಾಗದ ಸಾಮ್ರಾಜ್ಞಿಯೆನ್ನಿಸಿಕೊಂಡಿದ್ದಾಳೆ.

ಸ್ಟೆಫಿ ಮತ್ತೊಮ್ಮೆ ವಿಂಬಲ್ಡನ್ ಕಿರೀಟ ಧರಿಸಿದ್ದಾಳೆ. ಮೊನ್ನೆ ಮೊನ್ನೆ ಫ್ರೆಂಚ್ ಓಪನ್‌ನಲ್ಲಿ ಸ್ಯಾಂಚೆಸ್ ಎದುರು ಪರಾಭವಗೊಂಡಾಗ ವಿಂಬಲ್ಡನ್‌ನಲ್ಲಿ ಸ್ಟೆಫಿ ಸಾಕಷ್ಟು ಪೈಪೋಟಿ ಹೋರಾಟ ನಡೆಸಬೇಕಾಗುವುದೆಂದು ನಿರೀಕ್ಷಿಸಿದ್ದರು. 19 ವರ್ಷದ ಸ್ಟೆಫಿ ಕಳೆದ ವರ್ಷ ತಾನು ಧರಿಸಿದ ವಿಂಬಲ್ಡನ್ ಕಿರೀಟ ಆಕಸ್ಮಿಕ ಕೊಡುಗೆಯಲ್ಲ ಎಂಬುದನ್ನು ಮನದಟ್ಟು ಮಾಡಲು ಸಾಕಷ್ಟು ಹೋರಾಟ ನಡೆಸಿದಳು. ತನ್ನನ್ನು ಸೋಲಿಸಲೆಂದು ಒಂದು ವರ್ಷಕಾಲ ತರಬೇತಿ ಪಡೆದ ಮಾರ್ಟಿನಾ ನವ್ರಾಟಿಲೋವ ಎದುರು ಹಟ, ಹಾಗು ಛಲದಿಂದ ಸೆಣಸಿ, ಅಂತಿಮವಾಗಿ ಗೆಲುವು ಸಾಧಿಸಿದ ಸ್ಟೆಫಿ ವಿಶ್ವದ ನಂ.1 ಟೆನ್ನಿಸ್ ಆಟಗಾರ್ತಿ ಎಂಬ ಕೀರ್ತಿಗೆ ಪಾತ್ರಳಾದದ್ದು ಈಗಾಗಲೇ ಇತಿಹಾಸದ ಪುಟದಲ್ಲಿ ಸೇರಿಹೋಗಿದೆ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಡೆದ ಸೋಲ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗಳಿಸಿ ಗ್ರ್ಯಾಂಡ್‌ಸ್ಲಾಮ್ ಪದವಿ ಪಡೆದಾಗಲೇ ಸ್ಟೆಫಿಯನ್ನು ಟೆನ್ನಿಸ್ ರಂಗದಲ್ಲಿ ಮೂಡಿರುವ ಹೊಸ ನಕ್ಷತ್ರವೆಂದು ಗುರುತಿಸಲಾಗಿತ್ತು. ಕಳೆದ ವಿಂಬಲ್ಡನ್‌ನಲ್ಲಿ ವಿಂಬಲ್ಡನ್ ರಾಣಿ ಮಾರ್ಟಿನಾಳನ್ನು 5-7, 6-2, 6-1 ರಿಂದ ಮಣಿಸಿ ವಿಂಬಲ್ಡನ್ ಕಿರೀಟ ಧರಿಸಿದ ಸ್ಟೆಫಿಯ ಗೆಲುವು ಅನಿರೀಕ್ಷಿತವಾದದ್ದೆಂದೇ ಎಲ್ಲರ ಭಾವನೆಯಾಗಿತ್ತು. ನವ್ರಾಟಿಲೋವಾ ಇತಿಹಾಸ ನಿರ್ಮಿಸುವ ಹಾದಿಯಲ್ಲಿದ್ದಾಗ ಸ್ಟೆಫಿ ನೀಡಿದ ಪೆಟ್ಟು ಅದು. ಆಗ ಮಾರ್ಟಿನಾ ಈ ಪಂದ್ಯವನ್ನೇನಾದರೂ ಗೆದ್ದು ವಿಂಬಲ್ಡನ್ ಕಿರೀಟ ಧರಿಸಿದ್ದರೆ 50 ವರ್ಷಗಳ ಮೊದಲು ವಿಲ್ಸಮೂಡಿ ನಿರ್ಮಿಸಿದ ದಾಖಲೆ ನುಚ್ಚುನೂರಾಗುತ್ತಿತ್ತು. ಮಾರ್ಟಿನಾಳ ಕನಸಿಗೆ ಬೆಂಕಿ ಇಟ್ಟು ಸ್ಟೆಫಿ ವಿಂಬಲ್ಡನ್ ಕಿರೀಟ ಕಸಿದುಕೊಂಡಳು. ತನ್ನ ಆ ಗೆಲುವು ಆಕಸ್ಮಿಕವಲ್ಲ ಎಂಬುದನ್ನು ಖಚಿತಪಡಿಸಲು ಆಸ್ಟ್ರೇಲಿಯನ್ ಓಪನ್ ಛಾಂಪಿಯನ್‌ಶಿಪ್‌ನಲ್ಲಿ ಕ್ರಿಸ್ ಎವರ್ಟ್‌ಳನ್ನು ಮಣಿಸಿದಳು. ಅಷ್ಟೇ ಅಲ್ಲ ನಂತರ ನಡೆದ ಫ್ರೆಂಚ್ ಓಪನ್‌ನಲ್ಲಿ ತನ್ನಷ್ಟೆ ವಯಸ್ಸಿನ ನಟಾಲಿಯಾ ಜ್ವಕೀವಾಳನ್ನು ಕೇವಲ 32 ನಿಮಿಷದಲ್ಲಿ ೬-0. ೬-0ಯಿಂದ ಮಣಿಸಿದಳು. ಸಾಲದೆಂಬಂತೆ ಅಮೇರಿಕನ್ ಓಪನ್‌ನಲ್ಲಿ ಸುಂದರಿ ಗೇಬ್ರಿಯಲ್ ಸಬಾಟನಿಯನ್ನು 3 ಸೆಟ್‌ಗಳಲ್ಲೇ ಮಣ್ಣುಮುಕ್ಕಿಸಿದಳು.

ಈ ಎಲ್ಲ ಗೆಲುವಿನಿಂದ ಬೀಗದೆ ನಿಯಮಿತ ಅಭ್ಯಾಸ ನಡೆಸಿದರೂ ಅದೇಕೋ ಮೊನ್ನೆ ಬಾಲಕಿ ಸ್ಯಾಂಚೆಸ್ ಎದುರು ಸೋತಳು. ‘ನಾನು ಸೋತದ್ದು ಹೊಟ್ಟೆನೋವಿನಿಂದ’ ಎಂದು ಹೇಳುವಂತೆ ಪತ್ರಕರ್ತರು ಮನವೊಲಿಸಲು ಪ್ರಯತ್ನಿಸಿದರೂ ಸ್ಟೆಫಿ ಹಾಗೆ ಹೇಳಲಿಲ್ಲ. ‘ಇಲ್ಲ, ಸ್ಯಾಂಚೆಸ್ ಉತ್ತಮವಾಗಿಯೇ ಆಡಿದ್ದಾಳೆ’–ಎಂದಳು. ‘ಕ್ರೀಡಾ ಮನೋಭಾವ’–ಎಂದರೆ ಏನು ಎಂಬುದು ಸ್ಟೆಫಿಯಿಂದ ಕಲಿಯಬೇಕು. ಮಾರ್ಟಿನಾ ಎದುರು ಸೆಣಸುವಾಗಲೂ ಅಷ್ಟೆ. ಎಂತಹ ಅದ್ಭುತ ಸಂಯಮ ಸ್ಟೆಫಿಯದು. ಎದುರಾಳಿಗಳ ಬೆರಳು ಕಚ್ಚುವಂತಹ ಉತ್ತಮವಾದ ಸರ್ವ್ ಹಾಗು ಬ್ಯಾಕ್-ಹ್ಯಾಂಡ್ ಹೊಡೆತಗಳು. ಮಾರ್ಟಿನಾ, ಕ್ರಿಸ್, ಮೊನಿಕಾಸೆಲೆಸ್, ಸ್ಯಾಂಚೆಸ್ ...... ಎಂತೆಂತಹವರೂ ಸ್ಟೆಫಿಯ ಆತ್ಮಸ್ಥೈರ್ಯದ ಮುಂದೆ ನಿಲ್ಲದಾದರೂ ಇವೆಲ್ಲದರ ನಡುವೆ ಸ್ಟೆಫಿ ತಾನೊಬ್ಬ ಸಭ್ಯ ಆಟಗಾರ್ತಿ ಎಂಬುದನ್ನು ಮನದಟ್ಟು ಮಾಡಿಕೊಟ್ಟಳು.

ಜರ್ಮನ್ ಆಟಗಾರರು ಅತ್ಯಂತ ಶಿಸ್ತಿನ ಆಟಗಾರರು. ಅವರೆಂದೂ ಭಾವೋದ್ವೇಗಕ್ಕೆ ಒಳಗಾಗುವುದಿಲ್ಲ ಎಂಬ ಮಾತಿದೆ. ಆದರೂ ಗೆಲುವು ತನ್ನ ಪಾಲಾಗುತ್ತಿದ್ದಂತೆ ಸ್ಟೆಫಿಯ ಸುಂದರ

ವಾದ ಪುಟ್ಟ ಕಂಗಳಿಂದ ಕಣ್ಣೀರು ಮುತ್ತಿನ ಮಣಿಗಳಂತೆ ಉರುಳಿದವು. ಆಗ ನಮಗನ್ನಿಸಿದ್ದು, ಸ್ಟೆಫಿ ಜರ್ಮನ ಟೆನ್ನಿಸ್ ಆಟಗಾರ್ತಿಯಾಗುವುದಕಿನ್ನ ಮುಂಚೆ ಭಾವನೆಗಳು ತುಂಬಿರುವ ಮನುಷ್ಯಳಲ್ಲವೆ? ಎಂದು ಮಾತ್ರ.

ಈಚೆಗೆ ಹುಲ್ಲಿನ ಮೈದಾನದ ಮೇಲೆ ಪ್ರಭುತ್ವ ಗಳಿಸಿಕೊಂಡಿದ್ದ ಸ್ಟೆಫಿ, ಮಣ್ಣಿನ ಮೈದಾನದ ಮೇಲೆ ಆಡುವುದನ್ನು ಕಂಡರೆ ನವ್ರಾಟಿಲೋವಾರನ್ನು ಮಣಿಸುವುದು ಕಷ್ಟದ ಕೆಲಸ ಎಂದೇನೂ ಅನ್ನಿಸಿರಲಿಲ್ಲ.

ಸ್ಟೆಫಿಯನ್ನು ಹತ್ತಿರದಿಂದ ಕಂಡವರು ಹೇಳುವುದು ಆಕೆ ಬಹು ನಾಚಿಕೆ ಸ್ವಭಾವದವಳೆಂದೇ. ಆಕೆಯ ಗೆಳೆಯ ಕೂಡ ಟೆನಿಸ್ ಆಡುತ್ತಾನೆ. ಆತ ಅಲೆಗ್ಸಾಂಡರ್ ಮ್ರಾಂಜ್. 164ನೇ ಕ್ರಮಾಂಕದ ಮ್ರಾಂಜ್ ಎಂದರೆ ಸ್ಟೆಫಿಗೆ ಅತ್ಯಂತ ಪ್ರೀತಿ. ಆತನೊಂದಿಗೆ ಸಂತೋಷದಿಂದ ದಿನಗಳನ್ನು ಕಳೆಯುವುದೆಂದರೆ ಸ್ಟೆಫಿಗೆ ಇಷ್ಟ. ಆದರೆ ಅವಳ ಅಭಿಮಾನಿಗಳಿಂದಾಗಿ ಸ್ಟೆಫಿಗೆ ಈಚೆಗೆ ಅದೂ ಅಸಾಧ್ಯವಾಗಿದೆ. ಒಬ್ಬ ಅಭಿಮಾನಿಯಂತೂ ಸ್ಟೆಫಿಯ ಕಾರಿನೆದುರೇ ತನ್ನ ಕೈ ಬೆರಳು ಕತ್ತರಿಸಿಕೊಂಡು ಪ್ರೇಮ ಭಿಕ್ಷೆ ಬೇಡಿದ್ದಾನೆ. ಇದರಿಂದ ಸ್ಟೆಫಿಗೆ ಸಾಕಷ್ಟು ಕಸಿವಿಸಿಯಾಗಿದೆ. ಆದರೆ ವಿಧಿಯಿಲ್ಲದೆ ಇವೆಲ್ಲವನ್ನೂ ಎದುರಿಸುವುದು ಸ್ಟೆಫಿಗೆ ಅನಿವಾರ್ಯವಾಗಿದೆ.

1987ರಲ್ಲಿ ಮೊದಲ ಬಾರಿಗೆ ಫ್ರೆಂಚ್ ಓಪನ್ ಗೆಲ್ಲುವುದರ ಮೂಲಕ ಕೀರ್ತಿಯ ಶಿಖರ ಆರೋಹಣ ಮಾಡಲು ಆರಂಭಿಸಿದಂದಿನಿಂದಲೂ ಸ್ಟೆಫಿ ಒತ್ತಡದೊಂದಿಗೆ ಸೆಣಸುವುದು ಅಭ್ಯಾಸಮಾಡಿಕೊಂಡಿದ್ದಾಳೆ. 17 ವರ್ಷವಾದಾಗಲೇ 32ರ ಕ್ರಿಸ್ ಎವರ್ಟ್ 30ರ ಮಾರ್ಟಿನಾರನ್ನು ಎದುರಿಸಿ ಮಣ್ಣು ಮುಕ್ಕಿಸಿ 5-2 ಪಂದ್ಯಗಳಿಂದ ವಿಶ್ವದ ನಂ-1 ಟೆನಿಸ್ ತಾರೆಯೆಂಬ ಕೀರ್ತಿಗೆ ಪಾತ್ರಳಾದ ಸ್ಟೆಫಿ ಫ್ರೆಂಚ್ ಓಪನ್‌ನಲ್ಲಿ ಸ್ಯಾಂಚೆಸ್‌ಗೆ ಸೋತರೂ ಪುನಃ ವಿಂಬಲ್ಡನ್ ಗೆಲ್ಲುವುದರ ಮೂಲಕ ತನ್ನ ಶಕ್ತಿ ಇನ್ನೂ ಕುಂದಿಲ್ಲ, ತಾನಿನ್ನೂ ನಂ-1 ಟೆನಿಸ್ ತಾರೆಯೇ ಎಂಬುದನ್ನು ಖಚಿತಪಡಿಸಿದ್ದಾಳೆ.

ಮುರಳೀಧರ ಖಜಾನೆ

ಮಹಿಳೆ ದೂರಿಗೆ ಪ್ರತ್ಯೇಕ ಘಟಕ

ಮಹಿಳೆಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಪ್ರಕರಣಗಳು ಹೆಚ್ಚು ಹೆಚ್ಚು ಬೆಳಕಿಗೆ ಬರುತ್ತಿರುವುದರ ಪರಿಣಾಮವಾಗಿ ಸರ್ಕಾರದ ಆಡಳಿತ ಯಂತ್ರದಲ್ಲಿ ಮೇಲು ನೋಟಕ್ಕಾದರೂ ಪ್ರಗತಿ ಪರ ಎನಿಸುವ ನಿಲುವುಗಳು ಕಂಡು ಬರುತ್ತಿವೆ.

ಮಹಿಳೆಯರ ಸಮಸ್ಯೆಗಳು ಕೇಂದ್ರೀಕರಿಸುವ ಉದ್ದೇಶದಿಂದ, ಮಹಿಳೆಯರ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ, ಪ್ರತ್ಯೇಕ ನ್ಯಾಯಾಲಯ ಇದೀಗ ಪೊಲೀಸ್ ಇಲಾಖೆ ಮಹಿಳೆಯರ ದೂರಿಗೆ ಪ್ರತ್ಯೇಕ ಘಟಕ ಸ್ಥಾಪಿಸುತ್ತಿದೆ.

ಮಹಿಳೆಯರ ಕುಂದು ಕೊರತೆಗಳನ್ನು ವಿಚಾರಿಸಿ ಅವುಗಳಿಗೆ ಪರಿಹಾರ ಒದಗಿಸುವುದಕ್ಕಾಗಿ ನಗರದ ಪೊಲೀಸ್ ಕಮಿಷನರ್ ಅವರ ಕಛೇರಿಯನ್ನು ಮಹಿಳಾ ದೂರು ಘಟಕವನ್ನು ತೆರೆಯಲಾಗಿದೆಯೆಂದು ಇತ್ತೀಚೆಗೆ ಪೊಲೀಸ್ ಕಮಿಷನರ್ ಆರ್. ರಾಮಲಿಂಗಂ ಪ್ರಕಟಿಸಿದ್ದಾರೆ. ಇಬ್ಬರು ಮಹಿಳಾ ಸಬ್ ಇನ್ಸ್‌ಪೆಕ್ಟರ್, ಒಬ್ಬ ಪುರುಷ ಸಬ್ ಇನ್ಸ್‌ಪೆಕ್ಟರ್ ಮತ್ತು 6 ಮಂದಿ ಮಹಿಳಾ ಕಾನ್ಸ್‌ಟೇಬಲ್‌ಗಳನ್ನು ಹೊಂದಿದ ಈ ಘಟಕ ಮಹಿಳೆ ತರುವ ಯಾವುದೇ ವಿಧವಾದ ಸಮಸ್ಯೆಗಳಿಗೆ ಕುಂದು ಕೊರತೆಗಳಿಗೆ ಪರಿಹಾರ ಒದಗಿಸಲು ಪ್ರಯತ್ನಿಸುವುದು ಈ ಘಟಕದ ಮುಖ್ಯ ಉದ್ದೇಶವಾಗಿದೆ.

ಮಹಿಳೆಯರು ನೀಡುವ ದೂರುಗಳ ವಿಚಾರಣೆಗೆ ಹಾಗೂ ಅವರ ಕುಂದು ಕೊರತೆಗಳನ್ನು ಸಮಸ್ಯೆಗಳನ್ನು ಪರಿಹರಿಸಲು ಪ್ರತ್ಯೇಕ ಘಟಕವನ್ನು ಸ್ಥಾಪಿಸಿರುವುದು ಸ್ವಾಗತಾರ್ಹವಾದರೂ, ನೊಂದ ಮಹಿಳೆಯರಿಗೆ ಸೂಕ್ತ ಪರಿಹಾರವನ್ನು ದೊರಕಿಸಿಕೊಡುವುದು ಈ ಘಟಕದ ಕಾರ್ಯವೈಖರಿಯನ್ನವಲಂಬಿಸಿದೆ.

ಕಾನೂನಿನ ಚೌಕಟ್ಟಿನಲ್ಲಿ ಪರಿಹಾರ ಹುಡುಕುತ್ತಿರುವ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಹಾಗೂ ಕಾನೂನಿನಲ್ಲಿರುವ ವೈರುಧ್ಯಗಳನ್ನು ಈ ಪ್ರತ್ಯೇಕ ಘಟಕದ ಜವಾಬ್ದಾರಿ ವಹಿಸಿಕೊಳ್ಳುವ ವ್ಯಕ್ತಿಗಳು ಗಮನಿಸಬೇಕಾಗುತ್ತದೆ. (ಸ್ತ್ರೀಯರ ಮೇಲೆ ನಡೆಯುವ ಹಿಂಸೆ, ದೌರ್ಜನ್ಯ, ವರದಕ್ಷಿಣೆಯ ಕಿರುಕುಳ ಅತ್ಯಾಚಾರದಂತಹ ಪ್ರಕರಣಗಳು ಪೊಲೀಸ್ ಖಾತೆಯ ಮೂಲಕ ನ್ಯಾಯಾಲಯಕ್ಕೆ ಹೋಗುವ ಬಹುಪಾಲು

ಕೇಸುಗಳು ಸಾಕ್ಷಿಗಳ ಕೊರತೆಯಿಂದಲೋ, ತಾಂತ್ರಿಕ ದೋಷಗಳಿಂದಲೋ, ಪೊಲೀಸ್ ನೀಡುವ ವೈರುಧ್ಯ ಮಯ ಹೇಳಿಕೆಗಳಿಂದಲೋ, ಎಫ್.ಐ.ಆರ್.ನಲ್ಲಿರುವ ಅಪರಿಪೂರ್ಣತೆಯಿಂದಲೋ, ಪೊಲೀಸ್ ಕೇಸ್ ಎನ್ನುವ ಲಘು ಧೋರಣೆಗಳಿಂದಲೊ ಬಿದ್ದು ಹೋಗುತ್ತದೆ) ನೊಂದ ಮಹಿಳೆಯೊಬ್ಬಳು ನ್ಯಾಯಾಲಯದಲ್ಲಿ ಗೆಲ್ಲು ವುದನ್ನು ಜೀವನದ ಏಕೈಕ ಗುರಿಯನ್ನಾಗಿಸಿಕೊಳ್ಳುವುದು ತೀರಾ ಸಾಮಾನ್ಯ. ಅಂತಹ ಪರಿಸ್ಥಿತಿಯಲ್ಲಿ ಆಕೆಗುಂ ಟಾಗುವ ಆಘಾತ ಭರಿಸಲಾಗದ್ದು.

ಎಫ್.ಐ.ಆರ್‌ನ್ನು ನ್ಯಾಯಾಲಯಕ್ಕೆ ಸಲ್ಲಿಸಿ ವಿಚಾರಣೆಗೆ ಬಂದಾಗ ಇನ್ನಿತರ ವೈರುಧ್ಯಗಳೊಂದಿಗೆ ಪೊಲೀಸ್ ವ್ಯವಸ್ಥೆಯ ವೈರುಧ್ಯಗಳು ಕೈ ಜೋಡಿ ಸುತ್ತವೆ. ಎಫ್.ಐ.ಆರ್.ನಲ್ಲಿ ಕಂಡು ಬರುವ ತಾಂತ್ರಿಕ ದೋಷಗಳಿಂದಲೆ ಪ್ರಥಮ ಹಂತದಲ್ಲಿಯೇ ಕೇಸುಗಳು ಬಿದ್ದ ಪ್ರಕರಣಗಳು ಸಾಕಷ್ಟಿವೆ. ಇನ್ನು ವಿಚಾರಣಾ ಸಮಯದಲ್ಲಿ, ಅಪರಿಪೂರ್ಣ ಎಫ್.ಐ.ಆರ್., ಅದರ ಲ್ಲಿನ ತಾಂತ್ರಿಕ ದೋಷಗಳು, ಸರಿಯಾದ ಸಾಕ್ಷಿಗಳ ಕೊರತೆ, ಮುಂತಾದವು ಪ್ರಮುಖವಾಗಿ ಸೋಲಿಗೆ ಕಾರ ಣಗಳಾಗುತ್ತವೆ. ಇದರರ್ಥ ಗೆಲ್ಲುವ ಉದ್ದೇಶದಿಂ ದಲೇ ಎಫ್.ಐ.ಆರ್.ನಲ್ಲಿ ಇಲ್ಲದ ಸಂಗತಿಗಳನ್ನು ಸೇರಿ ಸಬೇಕೆಂದಲ್ಲ. ನ್ಯಾಯಾಲಯದಲ್ಲಿ ಗೆಲ್ಲಲು ಸಾಕಷ್ಟು ಬಲ ವಾದ ಅಂಶಗಳಿದ್ದರೂ, ಅವುಗಳನ್ನು ರೆಕಾರ್ಡ್ ಮಾಡಿ ರುವುದಿಲ್ಲ. ಸರಿಯಾದ ವಿವರಗಳನ್ನು ಸಂಗ್ರಹಿಸದೇ ಇರುವುದು, ನಿರ್ಲಕ್ಷ್ಯ, ಬೇಜವಾಬ್ದಾರಿ, ಅಜ್ಞಾನ ಮುಂತಾದವು ಪ್ರಮುಖವಾಗಿ ಕಂಡುಬರುವ ಅಂಶಗಳು.


"ಸ್ಥಳ ಪರೀಕ್ಷೆ"ಯಂತಹ ಮುಖ್ಯವಾದ ಅಂಶ ವನ್ನು ಪೊಲೀಸ್ ಅಧಿಕಾರಿಗಳು ಬೇಜವಾಬ್ದಾರಿಯಿಂದ ಮಾಡಿದ ಘಟನೆಗಳು ವಿಪುಲವಾಗಿವೆ, ಕೇಸ್‌ಗೆ ಮೂಲ ಭೂತವಾದ ಅಂಶಗಳನ್ನು ಅಜ್ಞಾನದಿಂದಲೋ, ನಿರ್ಲ ಕ್ಷೆಯಿಂದಲೋ, ಅಥವಾ ವಿರೋಧಿ ಪಕ್ಷಗಳೊಂದಿಗೆ ಶಾಮೀಲಾಗಿ, ಬೇಕಾಬಿಟ್ಟಿ ಬರೆದಿರುವ ವರದಿಗಳು ನೊಂದ ಹೆಣ್ಣಿಗೆ ನ್ಯಾಯ ದೊರಕಿಸಿಕೊಡುವಲ್ಲಿ ಮಾರಕ ವಾಗುತ್ತವೆ. ಮಹಿಳೆಯರಿಗೆ ಸಂಬಂಧಪಟ್ಟ ಕಾನೂನಿನ ಬಗ್ಗೆ ಹಾಗೂ ಅವುಗಳ ಸಂಕೀರ್ಣತೆಗಳ ಬಗ್ಗೆ ಪೊಲೀಸ್ ಅಧಿಕಾರಿಗಳಲ್ಲಿ ಅಜ್ಞಾನ ಇರುವುದು ಸರ್ವೇ ಸಾಮಾ ನ್ಯವಾಗಿದೆ. ಲಭ್ಯವಿರುವ ಅಂಶಗಳನ್ನು ಅಜ್ಞಾನದಿಂದ ರೆಕಾರ್ಡ್ ಮಾಡದೇ ಇರುವಾಗ ಉಂಟಾಗುವ ಹಾನಿ ಅಪಾರ. ಎಷ್ಟೋ ವರ್ಷಗಳ ನಂತರ ಸಾಕ್ಷಿ ನೀಡು ವಾಗ ಎಫ್.ಐ.ಆರ್.ನಲ್ಲಿ ಬರೆದುದಕ್ಕಿಂತ ಬೇರೆ ಹೇಳುವುದು, ತಾಂತ್ರಿಕ ಅಂಶಗಳ ಬಗ್ಗೆ ಅಜ್ಞಾನ ವ್ಯಕ್ತ ಪಡಿಸುವುದು, ದೂರದ ಊರಿನಲ್ಲಿದ್ದಾಗ ಸಾಕ್ಷಿ ನೀಡಲು ಸರಿಯಾದ ಸಮಯದಲ್ಲಿ ಹಾಜರಾಗದಿರು ವುದು. ಮುಂತಾದವುಗಳಿಂದಲೇ ನ್ಯಾಯ ದೊರಕದೆ ಹೋಗುತ್ತದೆ. ನ್ಯಾಯಾಲಯದ ಆವರಣದಲ್ಲಿ ಪೊ ಲೀಸ್ ಕೇಸ್ ಎಂದರೆ ನಗೆಪಾಟಲಿಗೊಳಗಾಗುವ ಘಟ ನೆಗಳು ಅಪರೂಪವೇನಲ್ಲ.

ಮಹಿಳೆಯರ ದೂರಿಗೆ ಪ್ರತ್ಯೇಕ ಘಟಕ ಸ್ಥಾಪಿ ಸಿದುದು ಸಫಲವಾಗಬೇಕಾದರೆ ಪೊಲೀಸ್ ಕಮಿಶನರ್ ಇಂತಹ ಸಂಗತಿಗಳನ್ನು ಪ್ರಾಥಮಿಕವಾಗಿ ಗಮನಿಸ ಬೇಕಾಗುತ್ತದೆ. ನ್ಯಾಯಾಲಯದಲ್ಲಿ ಪೊಲೀಸ್ ಇಲಾ ಖೆಯ ಕಾರ್ಯವೈಖರಿಯಿಂದ ಇದುವರೆಗೂ ಸೋತ ಪ್ರಕರಣಗಳ ದೀರ್ಘ ಅಧ್ಯಯನ, ಮಹಿಳೆಯರ ಬಗೆ ಗಿರುವ ಕಾನೂನುಗಳ ಬಗ್ಗೆ ಸೂಕ್ತ ಜ್ಞಾನವನ್ನೂ ಪೊ ಲೀಸ್ ಇಲಾಖೆಯ ಎಲ್ಲಾ ದರ್ಜೆಯ ಅಧಿಕಾರಿಗಳು ಬೆಳೆಸಿಕೊಳ್ಳುವುದು ಮಹಿಳೆಯರ ಬಗೆಗಿರುವ ಧೋರ ಣೆಗಳನ್ನು ಬದಲಾಯಿಸಿಕೊಳ್ಳುವುದು, ಇಂತಹ ಸಮಸ್ಯೆಗ ಳನ್ನು ಇಲಾಖೆಯೊಳಗಡೆಯೇ ಚರ್ಚೆ, ವಿಚಾರ ಗೋಷ್ಠಿ, ಕಮ್ಮಟ ಮುಂತಾದವುಗಳನ್ನು ಏರ್ಪಡಿ ಸುವುದರ ಮೂಲಕ ನೊಂದ ಮಹಿಳೆಯರಿಗೆ ನ್ಯಾಯಾ ಲಯದಲ್ಲಿ ನ್ಯಾಯ ದೊರಕಿಸಿಕೊಡುವ ಹಂತದಲ್ಲಿ ಸ್ವಲ್ಪ ಮಟ್ಟಿಗಾದರೂ ಪೂರಕವಾಗುತ್ತದೆ.

ರಾಜೇಶ್ವರಿ ಎಚ್. ಎಸ್.



ಹೇಗೆ ಮರೆಯಲೆ ?



ಗೆಳತೀ -
ಚಳಿಯಲ್ಲಿ
ನಾ ಹೊದ್ದ ಕಂಬಳಿಯೊಳಗೆ
ನುಸುಳಿ
ಕಚಗುಳಿ ಇಟ್ಟು
ನರಳಿಸಿದವನ
ಹೇಗೆ ಮರೆಯಲೇ ?

ಕತ್ತಲಾಗುತ್ತಿದ್ದ ಹಾಗೇ
ಮೆತ್ತಗೆ
ಬಂದೆನ್ನ ಮೆತ್ತೆಯಲ್ಲಿ
ಮುತ್ತಿಗೆ ಹಾಕಿ
ಮುತ್ತಿಟ್ಟು
ಸುತ್ತಿ ಕೊಂಡವನ
ಪೇಗೆ ಮರೆಯಲೆ ?

ಪಾರದರ್ಶಕದುಡುಗೆಯನ್ನು
ನಿರಾಕರಿಸಿ
ಬರಸೆಳೆದು ತನ್ನೆದೆಗೆ
ಒರಗಿಸಿಕೊಂಡವನ
ಕರಗಿಸಿಕೊಂಡವನ
ಹೇಗೆ ಮರೆಯಲೇ ?

ಹೊಸ ಲೋಕದ
ರಸಿಕತೆಯಲ್ಲಿ
ಸ್ಖಲಿಸಿದ ಹನಿ
ನನ್ನೊಳಗೆ ಘನೀಭೂತವಾಗಿ
ಮಿಸುಕಾಡುವುದ
ಹೇಗೆ ಮರೆಯಲೇ ?

ಕರೆ ಕಳಿಸಿದರೂ ಬರದೆ
ಹಳಸಿದವಳೆಂದು ತಿಳಿಸಿ
ಈಗ ಅವ
ಬೇರೊಂದು ಹೂವಿಗೆ
ಹಾರಿರುವುದ
ಹೇಗೆ ಮರೆಯಲೇ ?
ಹೇಳು, ಹೇಗೆ ಮರೆಯಲೆ ?

ಇಂದಿರಾ ಯುಗಟಿ
ಯುಗಟಿ

ಸ್ವಾಭಿಮಾನದ ಊರುಗೋಲು –
ದಿಬ್ಬೂರು ಮಹಿಳೆಯರ ಹಾ. ಉ. ಸ. ಸಂಘ

ಡಿ. ಮಧುನಗರ್ಲೆ

ಮಹಿಳೆ ಎಂದಾಕ್ಷಣ ಕೆಲಸಕ್ಕೆ ಬಾರದವರೆಂದು ಮೂಗು ಮುರಿಯುವ ಕಾಲ ಈಗಿಲ್ಲ. ಗಣಿಗಳು, ಡ್ರೈವರ್, ಪೊಲೀಸ್ ಇತ್ಯಾದಿಗಳಿಂದ ಹಿಡಿದು ಮಹಿಳೆಯರಿಂದ "ಅಸಾಧ್ಯ" ದ ಕೆಲಸ ಯಾವುದು ಉಳಿದಿಲ್ಲ.. ಸಾಧ್ಯ – ಎನ್ನುವಂತೆ ಅನೇಕ ಕಠಿಣ ಕ್ಷೇತ್ರಗಳಲ್ಲೂ ಮಹಿಳೆಯರು "ತಮ್ಮ ಪ್ರತಿಭೆ" ಯನ್ನು ಪ್ರಜ್ವಲಿಸಿದ್ದಾರೆ. ಪ್ರತಿಯೊಂದು ಕಾರ್ಯದಲ್ಲಿ ಮೊದಲು ಹೆಜ್ಜೆಯಾಗಲು ಮಹಿಳಾ ಸಮಾಜಗಳು ಅವರಿಗೆ ಆಶ್ರಯ ಧಾಮ ಗಳಂತೆ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿವೆ.

ಅಂತಹದೊಂದು ೧೯೮೨ರಲ್ಲಿ ತುಮಕೂರು ತಾಲ್ಲೂಕಿನ ದಿಬ್ಬೂರು ಗ್ರಾಮದಲ್ಲಿ "ಮಹಿಳಾ ಸಮಾಜ" ವೊಂದು ಉದಯಿಸಿತು. ಮೊದ ಮೊದಲು ಸಮಯ ಕಳೆಯಲು ಸಾಂಸ್ಕೃತಿಕ ಚಟುವಟಿಕೆಗಳಿಗೆ ಒತ್ತಾಸೆ ಕೊಟ್ಟಿದ್ದ ಸಮಾಜವು ದಿನಗಳು ಸವೆದಂತೆ ಗ್ರಾಮೀಣ ಸ್ತ್ರೀಯರಿಗೆ ಸ್ವಯಂ ಉದ್ಯೋಗಗಳನ್ನು ಸೃಷ್ಟಿಸಲು ಪ್ರಾರಂಭಿಸಿ ಜೀವನಕ್ಕೆ ನೆರವಾಗುವಂತಹ ತಾಣವಾಯಿತು ಸರ್ಕಾರ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಹೊಲಿಗೆ ತರಗತಿಗಳು, ಗೃಹ ಕೈಗಾರಿಕೆಗೆ ಬೇಕಾದ ತರಬೇತಿಗಳು, ಶಿಬಿರಗಳು ಹಾಗೂ ಶಿಶು ಕೇಂದ್ರದಿಂದ ಶಿಶುವಿಹಾರಗಳು ಆರಂಭವಾಗಿ ಬೀದಿಯಲ್ಲಿನ ಮಕ್ಕಳಿಗೆ ಶಿಸ್ತುಪಾಲನೆಯ ದಾರಿ ತೋರಿಸಿತು.

ಗ್ರಾಮೀಣ ಪ್ರದೇಶಗಳಲ್ಲಿ ಅನಾದಿ ಕಾಲದಿಂದಲೂ ನಿರಂತರವಾಗಿ ಅತ್ಯಂತ ಶೋಚನೀಯ ಹಾಗೂ ಶೋಷಿತ ವರ್ಗವು. ನಾಗರೀಕ ಸಮಾಜ ಕಲ್ಯಾಣದೆದುರು ಸೃಷ್ಟಿಯಾಗುತ್ತಿರುವ ವಿಧವೆಯರ ವರ್ಗಗಳ ಸಮಸ್ಯೆಗಳ ಕಡೆ ಗಮನ ಹರಿಸಿ, ೧೯೮೬ರಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮಾಡಿ, ೨೦ ಅಂತಹ ಮಹಿಳೆಯರನ್ನು ಗುರುತಿಸಿ ಸಹಾಯ ಹಸ್ತ ನೀಡಿದೆ. ವ್ಯವಸಾಯದ ನಂತರ ಉಪ-ಕಸುಬಾಗಿರುವ ಹೈನುಗಾರಿಕೆಯನ್ನು ಅವಲಂಬಿಸುವಂತೆ ೧೫೦ ಮಹಿಳೆಯರಿಗೆ ಮಿಶ್ರತಳಿ ಹಸುಗಳನ್ನು ನೀಡಲು ಒತ್ತಾಸೆ ನೀಡಿ, ಆರ್ಥಿಕ ಸುಸ್ಥಿತಿಗೆ ಆಶ್ರಯವಾಗಿದೆ.

ಮನಸ್ಸಿದ್ದರೆ ಮಾರ್ಗ......

ಭಾರತದಲ್ಲಿ 'ಭಾರತೀಯ ನಾರಿಯರಿಗೆ ಓದು ಬರಹದ ಮಿತಿ' ಲಕ್ಷ್ಮಣ ರೇಖೆಯಂತೆ ಒಂದು ಅಡ್ಡಗೆರೆಯಾಗಿದೆ. ಅವಳು ಎಸ್. ಎಸ್. ಎಲ್. ಸಿ. ಯೋ ಅಥವ ಪಿ. ಯು. ಸಿ. ಯಲ್ಲೋ ಓದುತ್ತಿದ್ದಾಗಲೆ ಮುಂದಿನ ವಿದ್ಯಾಭ್ಯಾಸದ ಆಸೆ, ಕನಸುಗಳನ್ನು ಒಡಲೊಳಗೆ ಮುಚ್ಚಿಕೊಂಡು ಬೇಯುತ್ತಾ, ಕೊರಗುತ್ತಾ ಹೆಸೆ ಮಣೆಗೆ ಒಪ್ಪಿಗೆಯಿಲ್ಲದ ದುಗುಡ ಮನಸ್ಸಿನಿಂದ 'ತಾಳಿ ಬಂಧನ' ಕ್ಕೆ ಸಿಲುಕಿ 'ಫೀನಿಕ್ಸ್' ಹಕ್ಕಿಯಂತೆ ಕೊರಗುತ್ತಾ ಸಂಸಾರದ ಪ್ರವಾಹದಲ್ಲಿ ಈಜಿ ಬದುಕುಳಿದು ಜೀವನ ಸಾಗಿಸಬೇಕು.

ಆದರೆ ದಿಬ್ಬೂರಿನ ದಿಟ್ಟ ಬಾಲೆ ಲಕ್ಷ್ಮಿಯ ಕತೆಯೇ ಬೇರೆ. ಛಲಗಾತಿ. ಸಮಾಜದ ಸಂಪ್ರದಾಯದ ಪ್ರವಾಹದೆದುರು ಈಜಿದವಳು. ಪಿ. ಯು. ಸಿ. ಯವರೆಗೆ ಓದಿ ಎಲ್ಲರಂತೆ 'ತಾಳಿ' ಗೆ ಕೊರಳು ಒಡ್ಡದೆ ಆಸೆ, ಆಕಾಂಕ್ಷೆಗಳನ್ನು ಹತ್ತಿಕ್ಕದೆ, ಮುಂಚೂಣಿಯಲ್ಲಿ ನಿಂತು ದಿಬ್ಬೂರಿನಲ್ಲಿ 'ಮಹಿಳಾ ಸಮಾಜ' ಪ್ರಾರಂಭಿಸಿದಳು. ಗ್ರಾಮದ ಅಭಿವೃದ್ಧಿ ಪೂರಕವಾದ ಕಾರ್ಯಕ್ರಮ ರೂಪಿಸಿ ಎಲ್ಲರಿಂದ 'ಸೈ' ಎನ್ನಿಸಿಕೊಂಡು ವಿಧವೆಯರು, ದುರ್ಬಲ ವರ್ಗದ ಮಹಿಳೆಯರ ಮುಖದಲ್ಲಿ ನಗೆ ಹೂವರಳಿಸಿದವಳು. ಮುಂದುವರೆದು ದಿಬ್ಬೂರು ಹಾಲು ಉತ್ಪಾದಕ ಸಹಕಾರ ಸಂಘದ ಮುಖ್ಯ ಚಾಲನಶಕ್ತಿಯಾಗಿ, ಮುಖ್ಯ ಪ್ರವರ್ತಕಳಾಗಿ ಸ್ವತಃ ತಾನೆ ಕಾರ್ಯದರ್ಶಿಯಾಗಿ ಹೆಚ್ಚಿನ ತಿಳುವಳಿಕೆಗಾಗಿ ಸಹಕಾರಿ ಶಿಕ್ಷಣ ತರಬೇತಿ ಪಡೆದು, ಹಿಂದೇಟು ಹಾಕುತ್ತಿದ್ದ ಮಹಿಳೆಯರು ತಾವಾಗೆ ಬಂದು ಸಮಾಜ ಸೇವೆಯಲ್ಲಿ ತೊಡಗುವಂತೆ ಸ್ಫೂರ್ತಿ ನೆಲೆಯಾದಳು. ಬರೀ ಗೃಹಿಣಿಯಂತೆ ಮುಖ ಮಾಡಿರುವ ಸಮಾಜದೆದುರು ಛಾತಿಯಿಂದ ಮನಸ್ಸು ಮಾಡಿದರೆ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪುರುಷರಷ್ಟೆ ಸಮಪಾಲಿದೆಯೆಂದು ಶ್ರೀಮತಿ ಲಕ್ಷ್ಮಮ್ಮ ಉದಾಹರಣೆಯಾಗಿದ್ದಾರೆ. ಹೆಣ್ಣು ಅಬಲೆಯಲ್ಲ ಅಲ್ಲವೆ?

ಸಮಾಜದಿಂದ ಸಂಘವಾದುದು :

ಹೈನುಗಾರಿಕೆಯಿಂದ ಸಮಾಜವು ಅಧಿಕ ಹಾಲು ಉತ್ಪಾದನೆಯಿಂದಾಗಿ ಮಾರುಕಟ್ಟೆಯ ವ್ಯವಸ್ಥೆ ಇಲ್ಲದೆ ಪರದಾಡುವ ಸ್ಥಿತಿಯಲ್ಲಿದ್ದಾಗ ನೆರವಿಗೆ ಬಂದ ತುಮಕೂರು ಜಿಲ್ಲಾ ಸಹಕಾರಿ ಯೂನಿಯನ್ ಮಾರ್ಗದರ್ಶನದ ಮೂಲಕ ತಮ್ಮದೇ ಆದ "ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ" ಹೊಂದಲು ತಿಳಿದು, ಗ್ರಾಮಸಭೆಯನ್ನು ನಡೆಸಿ, ಸಂಘ ಸ್ಥಾಪನೆ ಮಾಡಿ ನಂತರ ಹೆಚ್ಚಿನ ಸಹಕಾರಿ ರಂಗದ ವಿಷಯಕ್ಕಾಗಿ ಬೆಂಗಳೂರಿನ ಸಹಕಾರ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯಲು ಕಾರ್ಯದರ್ಶಿಯನ್ನು ಕಳುಹಿಸಿ, ಲೆಕ್ಕಪತ್ರ ಬರೆಯುವುದು, ಸಭೆ ಕರೆಯುವ ರೀತಿ, ರಾಸುಗಳ ಅಭಿವೃದ್ಧಿ, ಹೈನುಗಾರಿಕೆ ಪದ್ಧತಿ ಕುರಿತು ಪರಿಣತಿ ಪಡೆದು ಹಾಲಿನ ಉತ್ಪಾದನೆಯನ್ನು ಮಾಡಲಾಗಿದೆ.

ಇಂದು ಹಾಲು ಉತ್ಪಾದಕರ ಸಂಘವು ಹಳ್ಳಿಯ ಜನತೆಗೆ ಸ್ಥಳದಲ್ಲೇ ಹಾಲಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಿ, ನೆಮ್ಮದಿ ಜೀವನ ಕಾಣಲು ಪುಡಿಗಾಸು ಕೈಯಲ್ಲಿ ಆಡುವಂತೆ ಮಾಡಿದೆ. ಸಹಕಾರಿ ಸೌಲಭ್ಯ ಎಲ್ಲವನ್ನು ತಡೆದು ಸಂಘವು ಮೊದಲಿಗಿಂತ ಹತ್ತು ಪಟ್ಟು ಸದಸ್ಯತ್ವವನ್ನು ಹೆಚ್ಚಿಸಿಕೊಂಡಿದೆ! ಹಿಂದೆ ಸಾಲ ಪಡೆದು ಮಿಶ್ರತಳಿ ರಾಸುಗಳನ್ನು ಕೊಂಡುಕೊಂಡ ಫಲಾನುಭವಿಗಳು ಸಂಘಕ್ಕೆ ಹಾಲು ನೀಡಿ ಅದರಿಂದ ಬಂದ ಆ ಹಣದಿಂದ ಬ್ಯಾಂಕಿನ ಸಾಲವನ್ನು ಸಂಘದ ಮುಖೇನ ತೀರಿಸುತ್ತಿದ್ದಾರೆ! ಸಂಘ ಪ್ರಾರಂಭಿಸುವ ಮುನ್ನ ಇದ್ದ ಹಳ್ಳಿಯ ಪರಿಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಹೋಲಿಸಿ ನೋಡಿದರೆ ಹೈನುಗಾರಿಕೆಯಿಂದ ಮಹಿಳೆಯರ ಆರ್ಥಿಕ ಬದಲಾವಣೆಯನ್ನು ಸುಲಭವಾಗಿ ಗುರುತಿಸಬಹುದಾಗಿದೆ ಹಾಗೂ ಸಂಘವು ವಿದ್ಯಾವಂತ ನಿರುದ್ಯೋಗಿಗಳ ಕೈಗಳಿಗೆ ಕೆಲಸ ದೊರಕಿಸಿಕೊಟ್ಟಿದೆ.

ದಿಬ್ಬೂರು ಮಹಿಳೆಯರ ಉತ್ಪಾದಕರ ಸಂಘವು ಗ್ರಾಮದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿ, ಸಾಮಾಜಿಕ, ಆರ್ಥಿಕ ಬದಲಾವಣೆಗೆ ಪೂರಕವಾದ ಕಾರ್ಯಗಳನ್ನು ಸಾಧಿಸಿ, ಕರ್ನಾಟಕದ ಯಾವ ಗ್ರಾಮದಲ್ಲಾದರೂ ಮಹಿಳೆಯರು ಸ್ವಾಭಿಮಾನ, ಪ್ರಾಮಾಣಿಕತೆಯಿಂದ ಸಹಕಾರಿ ಚಳುವಳಿಯಲ್ಲಿ ಭಾಗವಹಿಸಿದಾಗ ಸಹಕಾರ ಚಳುವಳಿಯು ಜನತಾ ಚಳುವಳಿಯಾಗಿ ಗ್ರಾಮೀಣ ಹೊಸ ಬದುಕಿಗೆ ದಾರಿದೀಪವಾಗಬಹುದೆಂದು ತೋರಿಸಿದೆ.

ವಿಪರ್ಯಾಸ

ಈ ಘಟನೆ ನಡೆದು ಆಗಲೆ ಐದಾರು ತಿಂಗಳುಗಳು ಕಳೆದಿವೆ. ಜನರೆಲ್ಲ ಅದನ್ನು ಮರೆತಿದ್ದಾರೆ. ಆಗ್ಗಾಗ ಕೆಲವೊಬ್ಬರು ಮಾತ್ರ "ಪಾಪ! ಹೀಗಾಯ್ತಲ್ಲ" ಎಂದು ಲೊಚಗುಡುತ್ತಾರೆ. ನಾನು ಈಗ ಹೇಳಹೊರಟಿರುವುದು ನಮ್ಮ ನಿಮ್ಮಂತೆ ಬದುಕಿನಲ್ಲಿ ಆಸೆ. ಆಕಾಂಕ್ಷೆಗಳನ್ನಿಟ್ಟುಕೊಂಡು ನ್ಯಾಯವಾದ ರೀತಿಯಲ್ಲಿ ಈಡೇರಿಸಿಕೊಳ್ಳಲು ಸಾಧ್ಯವಾಗದಿದ್ದಾಗ ಮಣ್ಣಲ್ಲಿ ಮಣ್ಣಾಗಿ ಹೋದ ಸಾಮಾನ್ಯ ಹುಡುಗಿಯ ವ್ಯಥೆಯ ಕಥೆ. ಆಕೆ ಜೀವನದ ವಸಂತ ಕಾಲದಲ್ಲೆ ಈ ಲೋಕ ಬಿಟ್ಟು ಹೋಗಲು ಕಾರಣ ಇಂದಿನ ಪುರುಷ ಪ್ರಧಾನ ಸಮಾಜವೊ, ಅವಳ ಮನೆಯ ಹಿರಿಯರೊ ಅಥವ ಆಕೆಯೇ ದೋಷಿಯೋ, ಇದನ್ನು ವಿಶ್ಲೇಷಿಸುವಷ್ಟು ತಲೆ ನನಗಿಲ್ಲದುದರಿಂದ ಬುದ್ಧಿವಂತ ಓದುಗರ ಮೇಲೆಯೇ ಆ ಭಾರ ಹಾಕುತ್ತಿದ್ದೇನೆ. ಇಲ್ಲಿ ಹುಡುಗಿಯ ಹೆಸರು ಅಪ್ರಸ್ತುತ ಇದೊಂದು ನಿಜ ಸಂಗತಿ ಎಂದು ತಿಳಿದರೆ ಸಾಕು. ಸರಿ ಇನ್ನು ಕಥೆಯನ್ನು ಪ್ರಾರಂಭಿಸೋಣವೆ, ಪ್ರಿಯ ಓದುಗರನ್ನೆಲ್ಲ ಸಮಮ್ಮೂರಿಗೆ ಕರೆದೊಯ್ಯುತ್ತಿದ್ದೇನೆ. ಅವಳ ಪರಿಚಯ ಮಾಡಿಸಲು. ಮುಖ ಸಿಂಡರಿಸದೆ ನೀವೆಲ್ಲ ನನ್ನ ಜೊತೆ ಬರುವಿರಲ್ಲವೆ.

ಅದೋ ನೋಡಿ,ಅಲ್ಲಿ ಕಾಣುತ್ತಿದೆಯಲ್ಲವೆ ಹೆಂಚಿನ ಮನೆ ಅದರಲ್ಲಿಯೇ ಅವಳು ಇರುತ್ತಿದ್ದುದು. ಮನೆಯಲ್ಲಿ ತಂದೆ ತಾಯಿ ತಮ್ಮ ತಂಗಿ. ಇವಳೇ ಹಿರಿಯ ಮಗಳು. ತಂದೆ ಕಾಂಟ್ರಾಕ್ಟರ್. ಆದ್ರೇನು ಬಂತು ಮನೆಗೆ ಬರುವುದೇ ಅಮಾವಾಸ್ಯೆಗೊಮ್ಮೆ. ಹುಣ್ಣಿಮೆಗೊಮ್ಮೆ. ತಮ್ಮನಾದರೊ ಶುದ್ಧ ಪೋಲಿ. ಅಂಥ ಚಿಕ್ಕ ವಯಸ್ಸಿಗೆ ಸಿಗರೇಟು ಬೇಕು, ಓಸಿ ಆಡಬೇಕು. ತಂಗಿ ಚಿಕ್ಕವಳು, ತಾಯಿ "ಎಲ್ಲ ನನ್ನ ಕರ್ಮ"

ಎಂದು ಗೋಳಾಡುವವಳು. ಅಲ್ಲಿಂದ ಸ್ವಲ್ಪ ದೂರ ಇದೊ ಇಲ್ಲೆ ನಮ್ಮ ಮನೆ ಇರುವುದು. ಹೈಸ್ಕೂಲ್ ವಿದ್ಯಾಭ್ಯಾಸದಲ್ಲಿ ನಾವಿಬ್ಬರು ಸಹಪಾಠಿಗಳು ಜೊತೆಯಾಗಿ ಓಡಾಡಿದವರು. ಬರಬರುತ್ತ ನನ್ನ ಆ ಗೆಳತಿಯ ಮನೆ ಪರಿಸ್ಥಿತಿ ಬರಗಾಲದ ಬಡಕಲು ಎತ್ತಿನಂತಾಯ್ತು. ಮೇವಿಗಾಗಿ ಪಾಪ ಆಕೆಯೇ ಪರದಾಡುವಂತಾಯ್ತು. ಹೈಸ್ಕೂಲ್ ನಮ್ಮ ಮನೆಗಿಂತ ಬಹಳ ದೂರ ಇದ್ದುದರಿಂದ ಊಟ ಒಯ್ಯುತ್ತಿದ್ದೆವು. ಪ್ರತಿ ದಿನ ಊಟದ ಬಿಡುವಿನಲ್ಲಿ ಇವಳು ಒಬ್ಬ ವ್ಯಕ್ತಿಯ ಜೊತೆ ಸ್ಕೂಟರ್‌ನಲ್ಲಿ ಎಲ್ಲೋ ಹೋಗುತ್ತಿದ್ದಳು. ಬೆಲ್ ಆಗುವ ಮೊದಲೆ ಬಂದು ಬಿಡುತ್ತಿದ್ದಳು. ಇದು ನಮ್ಮ ಮೇಡಂಗಳಿಗಾರಿಗೂ ತಿಳಿದಿರಲಿಲ್ಲ. ಹೀಗೆ ಇರುವಾಗ ಒಂದು ದಿನ ನೀಟಾಗಿ ಅಲಂಕಾರ ಮಾಡ್ಕೊಂಡ ಒಬ್ಬ ಹೆಂಗಸು ಏಳು ವರ್ಷದ ಹುಡುಗನ ಕೈ ಹಿಡಿದುಕೊಂಡು ಆಫೀಸ್ ರೂಮಿಗೆ ಬಂದಳು. ಏನೋ ಕೇಳಲು ಹೋದ ನಾನು ಅಲ್ಲೆ ಹೆಡ್‌ಮಿಸ್ ಹತ್ರ ನಿತ್ಕೊಂಡಿದ್ದೆ. ಕುರ್ಚಿಯಲ್ಲಿ ಕುಳಿತ ಕೊಂಚ ಹೊತ್ತಿನ ನಂತರ ಆ ಹೆಂಗಸು ಗಳಗಳನೆ ಅಳಲು ಶುರು ಮಾಡಿದಳು. ವಿಷಯ ಏನೆಂದು ಮೇಡಂ ಕೇಳಲು, "ನೋಡಿ ಮೇಡಂ ನಿಮ್ಮ ಒಬ್ಬ ಸ್ಟುಡೆಂಟ್ ನನ್ನ ಗಂಡನ ಜೊತೆ ಓಡಾಡ್ತಿದಾಳೆ. ಅವಳ್ನ ಕಟ್ಕೊಂಡು ನಿನ್ನ ಹೊರ್ಗೆ ಹಾಕ್ತೀನಿ ಹೋಗು" ಅಂತಾರೆ. ಹೋಗು ಅಂದ್ರೆ ಈ ಮಗನ್ನ ಕಟ್ಕೊಂಡು ಯಾವ ಮುಖ ಹೊತ್ತು ತಂದೆ, ತಾಯಿ ಮನೆಗೆ ಹೋಗ್ಲಿ ನಾನು. ದಯವಿಟ್ಟು ನಿಮ್ಮ ಆ ಸ್ಟುಡಂಟ್‌ಗೆ ಬುದ್ಧಿ ಹೇಳಿ ಅವ್ರ ಜೊತೆ ಬಿಡ್ಸಿ ಬಹಳ ಉಪಕಾರ ಆಗ್ತದೆ" ಎಂದು ಬೇಡಿಕೊಂಡಳು.

ನಮ್ಮ ಮೇಡಂ ಕೂಡಲೆ ನನ್ನ ಗೆಳತಿಯನ್ನು ಕರ್ಸಿ, ಆ ಹೆಂಗಸಿನೆದುರಿಗೇ ಛೀಮಾರಿ ಹಾಕಿದರು. ಕೆಲವು ದಿನಗಳು ಕಳೆದ ಮೇಲೂ ಅವನ ಜೊತೆ ಬಿಡದಿದ್ದಾಗ (ಇವಳು ಅವನ ಜೊತೆ ಬಿಡಲಿಲ್ಲವೊ ಅವನಿಗೇ ಇವಳನ್ನು ಬಿಡಲು ಇಷ್ಟವಿರಲಿಲ್ಲವೊ) ಹೈಸ್ಕೂಲಿನಿಂದ ತೆಗೆದು ಹಾಕಿದರು. ನಾವಾಗ ಹೈಸ್ಕೂಲ್ ಕೊನೆ ವರ್ಷದಲ್ಲಿ ಓದುತ್ತಿದ್ದೆವು. ಆ ರೀತಿಯಲ್ಲಾದರೂ ಮನೆಯವರ ಹೊಟ್ಟೆ ತುಂಬಿಸುತ್ತಿದ್ದಳು ಆಕೆ. ಇಷ್ಟೊತ್ತಿಗಾಗಲೆ ಊರಲೆಲ್ಲ ಅವಳ ಬಗ್ಗೆ ಏನೇನೋ ಸುದ್ದಿ ಹರಡಿತ್ತು. ಅವಳ ಜೊತೆ ನಾನು ಮಾತನಾಡಬಾರದೆಂಬ ಕಟ್ಟಪ್ಪಣೆ ನನ್ನ ಹಿರಿಯರಿಂದ ಬಂದಿತ್ತು ನನಗೆ, ಆಕೆಯ ಪಾಲಿಗೆ ಮರ್ಯಾದಸ್ಥರು ಎನಿಸಿಕೊಂಡವರ ಬಾಗಿಲುಗಳು ಮುಚ್ಚಿಕೊಂಡವು. ಉಪಾಯ ಕಾಣದೆ ಒಂದು ಅಂಗಡಿಯ ಯಜಮಾನನ ಮಕ್ಕಳಿಗೆ ಟ್ಯೂಷನ್ ಹೇಳುವ ಕೆಲಸ ಹಿಡಿದಳು. ಅಲ್ಲಿ ಏನಾಯ್ತೊ ಅಂತು ಆ ಅಂಗಡಿ ಯಜಮಾನನ ತಮ್ಮನೊಂದಿಗೆ ಅವಳ ಸಖ್ಯ ಬೆಳೆದು ಅದೊಂದು ರೂಪು, ಆಕಾರ, ಹೆಸರು ಪಡೆಯಿತು. ಎಲ್ಲರೆದುರು ನಿರ್ಭಯವಾಗಿ ತಾನು ಇಟ್ಟುಕೊಂಡವಳೋ ಎನ್ನುವಂತೆ ವರ್ತಿಸುತ್ತಿದ್ದ ಆ ಪಾಪಿಷ್ಟ. ಅಲ್ನೋಡಿ ಹಾಂ, ಅಲ್ಲೆ ಅಲ್ಲೆ ಅದೇ ಅಂಗ್ಡಿ ಕೂತಿದಾನಲ್ಲ ಅಲ್ಲಿ ಅವ್ನೆ ಅವಳ್ನ ನಿರ್ನಾಮ ಮಾಡಿಬಿಟ್ಟ. ಬೇಕಾದಷ್ಟು ದಿನ ಇಟ್ಕೊಂಡು ಆಮೇಲೆ ಗೋವೆಯ ಒಬ್ಬ ಮುಸ್ಲಿಂ ಯುವಕನಿಗೆ ಅವಳನ್ನು ಮಾರಿಬಿಟ್ಟ. ಇಂಥ ಗಂಡಸರನ್ನು ನಡು ಬೀದೀಲಿ ಸುಡೋ ಬಿಸಿಲಲ್ಲಿ ಬಾರಕೋಲಿಂದ ಬಾರ್ಸಿ ಬಾರ್ಸಿ ಸಾಯಿಸ್ಬೇಕು. ಇಲ್ಲಿ ನಮ್ಮೂರಲ್ಲಿ ಇಷ್ಟೆಲ್ಲ ನಡೆದ್ರೂ ಹುಟ್ಟಿಸಿದ ತಂದೆ ಮನೆದಾರಿ ಹಿಡಿಲಿಲ್ಲ. ತಾಯಿ ತಮ್ಮನಿಗೇನು ಹೇಗಾದ್ರು ಉದರ ಪೋಷಣೆ ಆಗ್ತಿದೆಯಲ್ಲ ಸಾಕು. ಬಂದ ಮುಸ್ಲಿಂ ಯುವಕ ಎಲ್ಲ ಜನರೆದುರು ತನ್ನ ಜಾತಿಗೆ ತಕ್ಕಂತೆ ಮದುವೆ ಮಾಡಿಕೊಂಡ. ಅಂದಿನ ದಿನ ಆಕೆ ಬಹಳ ಸಂತೋಷಪಟ್ಟಿರಬೇಕು. ಮದುವೆ ಮುಗಿಸಿ ತನ್ನ ಜೊತೆ ಗೋವೆಗೆ ಅವಳನ್ನು ಕರೆದೊಯ್ದ. ೧೫ ದಿನಗಳ ನಂತರ ತಿರುಗಿ ಊರಲ್ಲಿ ಪ್ರತ್ಯಕ್ಷಳಾದಳು ನನ್ನ ಸಹಪಾಠಿ ಗೆಳತಿ. ಆಕೆಯ ಪತಿದೇವ ಪತ್ನಿಯನ್ನು ಅರಬ್ ರಾಷ್ಟ್ರದ ವ್ಯಕ್ತಿಗೆ ಮಾರಿದ್ದನೆಂದು, ಹೊರದೇಶಕ್ಕೆ ರಫ್ತಾಗುವದನ್ನು ಪ್ರತಿಭಟಿಸಿ ಓಡಿಬಂದಳೆಂದು ಸುದ್ಧಿ ಹರಡಿತ್ತು.

ಅವಳ ಹಿಂದೆಯೇ ಬಂದಿದ್ದ ಅವನು ತನ್ನದು ತಪ್ಪಾಯ್ತು ಇನ್ನೆಂದೂ ಹಾಗೆ ಒತ್ತಾಯಿಸಲಾರೆ ತಿರುಗಿ ಬಾ ಎಂದು ಕ್ಷಮೆ ಯಾಚಿಸಿ ಮತ್ತೊಮ್ಮೆ ಜೊತೆಗೆ ಕರೆದೊಯ್ದು ಯಮನಂತೆ. ಹೌದು, ಹೌದು ಇದೆ, ಇದೇ ಕೆಂಪು ಬಸ್ಸಿನಲ್ಲಿ ಅವಳಂದು ಹೋಗಿದ್ದು. ಹೋದವಳು ಹೋಗಿಯೇ ಬಿಟ್ಟಳು. ನಮ್ಮೂರಿಂದ ಗೋವೆಗೆ ಹೋಗಿ ಒಂದು ವಾರ ಕಳೆದಿತ್ತೇನೊ ಅಷ್ಟೆ, ಬಂದಿತು ಭಯಂಕರ ಸುದ್ದಿ "ನಿಮ್ಮ ಮಗಳು ಸ್ಟವ್ ಬರ್ಸ್ಟ್ ಆಗಿ ಸುಟ್ಕೊಂಡು ಸತ್ತುಹೋ

ದಳು". ಅದ್ದೇಗೆ ಸತ್ತಳೋ ಅವಳಿಗೇ ಗೊತ್ತು. ಸತ್ತಾಗ ಇನ್ನೂ ಇಪ್ಪತ್ತು ಮುಗಿದಿರಲಿಲ್ಲ, ಸುದ್ದಿ ತಿಳಿಯುತ್ತಲೆ ಎಲ್ಲ ದಿಗ್ಭ್ರಾಂತರಾಗಿ ಹೋದರು. "ಅಮ್ಮಮ್ಮಾ! ಆ ಹುಡ್ಗಿ ಸತ್ತಳೆ? ಹೌದೆ ಅವಳು ಸತ್ತಳೆ? ನಿಜವಾಗಿಯೂ ಸತ್ತಳೆ?" ನಿಜ ಅವಳು ಸತ್ತುಹೋದಳು. ತಮ್ಮ ಕಾರ್ಯಕ್ಕಾಗಿ ಅವಳನ್ನು ಬಳಸಿಕೊಂಡವರೆಲ್ಲ ಹಿಗ್ಗಿಹೋದರೆ, ತಮ್ಮ ತಪ್ಪಿನ ಅರಿವಾಗಿ ತಾಯಿ, ತಂದೆ ಬಾಯಿ ಬಡಿದುಕೊಂಡರು. ಪ್ರಯೋಜನವೇನು ಮನೆಯಲ್ಲಿ ಹಿರಿಯರು ನಿರ್ಲಕ್ಷಿಸಿದರೆ ಮಕ್ಕಳ ಗತಿ ಏನಾಗುವುದೆಂಬುದಕ್ಕಿದ ನಿದರ್ಶನ. ಸಂತೃಪ್ತಿಯ ಸಾವನ್ನು ಪಡೆದಳೆ ಅಕೆ, ಇಲ್ಲ ಈ ಭ್ರಷ್ಟ ಸಮಾಜದಲ್ಲಿಯ ಸಾಂಸಾರಿಕ ಜೀವನ ಹೊಟ್ಟೆ ತುಂಬಿಸಿ ಜೀರ್ಣಿಸಿಕೊಳ್ಳಲಾರದೆ ಒದ್ದಾಡಿ ಸತ್ತಳು.

ಹೀಗೆ ಹೇಳ ಹೆಸರಿಲ್ಲದೆ ದಿನಂಪ್ರತಿ ಅದೆಷ್ಟು ಜನ ಸಾವಿಗೀಡಾಗುತ್ತಾರೊ, ಹತ್ಯೆಗೊಳಗಾಗುತ್ತಾರೊ ಲೆಕ್ಕ ಇಟ್ಟವರಾರು. ಒಬ್ಬಾಕೆಯದು ಕೊಲೆಯಾದರೆ ಮತ್ತೊಬ್ಬಾಕೆಯದು ಆಕಸ್ಮಿಕ ಸಾವು. ಏನೇ ಆದರೂ ಬಲಿಯಾಗುವುದು ಮಾತ್ರ ಹೆಣ್ಣೆ. ದಿನವೂ ರೇಡಿಯೊ ಟಿ. ವಿ. ಪತ್ರಿಕೆಗಳು ಹೆಣ್ಣಿನ ಬಲಿಯ ನೂರಾರು ದಾರುಣ ಸಮಾಚಾರಗಳನ್ನು ಪ್ರಕಟಿಸುತ್ತವೆ, ಜಾಗೃತಿ ಮೂಡಿಸುವ ಕಾರ್ಯಕ್ರಮ ಬಿತ್ತರಿಸುತ್ತವೆ. ಎಷ್ಟು ಶಂಖ ಹೊಡ್ಕೊಂಡ್ರು ಅಷ್ಟೆ. ಬೋರ್ಗಲ್ಲ ಮೇಲೆ ಮಳೆ ಸುರಿದಂತೆ ಆಗೋವಲ್ಲ ಆಗ್ತಾನೆ ಇದೆ. ನಮ್ಮ ಭಾರತೀಯ ಯುವಜನರು ಸ್ವಲ್ಪ ಆಲಸಿಗಳು, ವಿಷಯ ಅವರ ತಲೆಗೆ ಹೋಗುವದು ನಿಧಾನ. ಇಷ್ಟೆಲ್ಲ ನಡೆಯುತ್ತಿರುವಾಗ ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ ಏನು ಲಾಭ. ವಾಸಿಪಡಿಸಲು ಆಗದಂಥ ಮಾರಕ ಪಿಡುಗಾಗಿದೆ ವರದಕ್ಷಿಣೆ. ವಿದ್ಯಾವಂತ ಯುವಕ, ಯುವತಿಯರಲ್ಲೂ ಬುದ್ಧಿ ಇಲ್ಲವೆಂದರೆ ಆಶ್ಚರ್ಯ. ವರದಕ್ಷಿಣೆಗೆ ಮದ್ದು ಪ್ರೇಮವಿವಾಹ ಎಂದುಕೊಂಡರೆ ಈಗೀಗ ಪ್ರೇಮವಿವಾಹಗಳು ನಾಟಕಗಳಾಗುತ್ತಿವೆ. ಬರ ಬರುತ್ತ ಎಷ್ಟು ಸಂಕುಚಿತ ಬುದ್ಧಿ ಬೆಳೆಯುತ್ತಿದೆ ಮಾನವರಲ್ಲಿ.

ಯುವತಿಯರು ಕೇವಲ ವೇಷ ಭೂಷಣಗಳಲ್ಲಿ ಪುರುಷನನ್ನು ಪ್ರತಿನಿಧಿಸಲು ಹೊರಟಂತಿದೆ. ಎಲ್ಲ ಪಾಶ್ಚಾತ್ಯರ ಅಂಧಾನುಕರಣೆ, ನಾವೆಲ್ಲ ಪಾಶ್ಚಾತರಂತಾದರೆ ನಮ್ಗೂ ಅವ್ರಿಗೂ ವ್ಯತ್ಯಾಸ ಏನು ಉಳಿತ್ತು "ಭಾರತೀಯರು" ಎಂದು ಇರುವುದಾದರೂ ಯಾಕೆ? ದಿನ ಕಳೆದಂತೆ ಕಡಿಮೆಯಾಗುತ್ತಿರುವ ನೈತಿಕತೆ ಒಬ್ಬರ ಮೇಲೆ ಇನ್ನೊಬ್ಬರಿಗೆ ವಿಶ್ವಾಸವಿಲ್ಲದಿರುವಿಕೆ, ಹೆಚ್ಚುತ್ತಿರುವ ಹಣದ ಮೇಲಿನ ಪ್ರೀತಿ, ಮನೋವಿಕಾರಗಳನ್ನು ಮುಚ್ಚಿಟ್ಟು ಸಂಭಾವಿತರಂತೆ ವರ್ತಿಸುವ ವ್ಯಕ್ತಿಗಳು. ಳೆಯುತ್ತಿರುವ ಸ್ವಾರ್ಥ, ಇಂಥ ಸಂದಿಗ್ದ ವಾತಾವರಣಕ್ಕೆ ಹೊಂದಿಕೊಳ್ಳಲಾರದೆ ನಿರಾಶೆಯಿಂದ ಆತ್ಮಹತ್ಯೆ ಮಾಡಿಕೊಳ್ಳಲು ಬಯಸುವ ಭಾವುಕ ಜೀವಿಗಳು. ಇದನ್ನೆಲ್ಲ ಗಮನಿಸುತ್ತಿದ್ದರೆ ನಮ್ಮ ವಿಶ್ವವಿನಾಶದ ಅಂಚಿನತ್ತ ಹೊರಟಿದೆಯೋ, ನಮ್ಮ ಯುವಜನಾಂಗವೇ ವಿನಾಶದ ಅಂಚಿನತ್ತ ಹೊರಟಿದೆಯೊ, ತಿಳಿಯದು ಹೀಗೆಯೇ ನಡೆಯುತ್ತಿದ್ದರೆ ಒಂದು ದಿನ ಮಾನವ ಮಾನವರ ನಡುವಿನ ಸಂಬಂಧಕ್ಕೆ ಬೆಲೆಯೇ ಇರಲಾರದೇನೊ ಪ್ರೀತಿ ಪ್ರೇಮ ಬಂಧನಗಳ ಮಹತ್ವವೇ ಉಳಿಯಲಾರದು. ಹೆಣ್ಣು ಗಂಡಿನ ಮದುವೆಯ ಮಧುರ ಬಂಧನಕ್ಕೆ ಮೌಲ್ಯವೇ ಇಲ್ಲದಾದೀತು. ಎಲ್ಲ ನೆನ್ಸಿಕೊಂಡ್ರೆ ವಿಚಿತ್ರ, ವಿಪರ್ಯಾಸ ಅನಿಸುವುದಿಲ್ಲವೆ?.

ರಾಧಾ
ಗ. ಗುಡಿ.

ಅಪೂರ್ವ ಜಾನಪದ ಕಲಾವಿದೆ: ತೀಜನ್‌ಬಾಯಿ

ಭಾರತ ಹಲವು ಭಾಷೆಗಳು ಹಲವು ಜನಾಂಗಗಳನ್ನು ಹೊಂದಿರುವ ದೇಶ. ಆ ವಿವಿಧತೆ ಜಾನಪದ ಪ್ರಾಕಾರಕ್ಕೂ ಅನ್ವಯಿಸುತ್ತದೆ. ಕೆಲವು ವರ್ಷಗಳ ಹಿಂದೆ ಜಾನಪದ ನಶಿಸಿ ಹೋಗುತ್ತದೆ ಎಂಬ ಕೂಗಿಗೆ ಈಗ ಮತ್ತೆ ಜನರ ಆದರ ಗಳಿಸುತ್ತಿರುವ ಈ ಕಲೆಗಳಿಗೆ ಕಲಾವಿದರೆ ಕಾರಣ. ಅಂತಹ ಜಾನಪದ ಕಲೆಗಳಲ್ಲಿ ಒಂದು 'ಪಾಂಡ್ವಾನಿ' – ಪಾಂಡವರ – ಮಹಾಭಾರತದ ಕಥೆ. ಪಾಂಡ್ವಾನಿಯ ಜೊತೆಗೆ ಈಗ ಮತ್ತೊಂದು ಹೆಸರು ಸೇರಿದೆ – ತೀಜನ್‌ಬಾಯಿ. ಈ ಪಾಂಡ್ವಾನಿಯ ಅನಭಿಷಿಕ್ತ ಸಾಮ್ರಾಜ್ಞಿ ಎಂದರೂ ತಪ್ಪಿಲ್ಲ ಈಗ ಆಕೆಗೆ ಸರಿಗಟ್ಟುವ ಪಾಂಡ್ವಾನಿಯ ಕಲಾವಿದರೇ ಇಲ್ಲ ಎನ್ನಬಹುದು. ಆಕೆಯ ಪ್ರತಿಭೆ ಸಂವೇದನಾಶೀಲ ವ್ಯಾಖ್ಯಾನ, ನಿಷ್ಕಳಂಕ ವ್ಯಕ್ತಿತ್ವ ಆಕೆಗೆ ಅಪಾರ ಕೀರ್ತಿ ತಂದಿದೆ.

ಪಾಂಡ್ವಾನಿ–ಲೆಕ್ಕವಿಲ್ಲದಷ್ಟು ಪಾತ್ರಗಳ ಸಾವಿರಾರು ದೃಶ್ಯಗಳನ್ನು ಒಳಗೊಂಡ ಮಹಾಭಾರತದ ಕಥೆ, ಇದನ್ನು ಸಾಮಾನ್ಯವಾಗಿ ಹಾಡುವವರು ಹರಿಜನರು ಅಥವಾ ಗಿರಿಜನರು. ಅದರಲ್ಲೂ ಅನಕ್ಷರಸ್ಥರೇ ಹೆಚ್ಚು, ಹಾಗಾಗಿ ಇದಕ್ಕೆ ನೆನಪಿನ ಶಕ್ತಿಯೇ ಆಧಾರ. ಇದರಲ್ಲಿ 2 ರೀತಿ, ವೇದಮತಿ ಶೈಲಿ — ಕೇವಲ ನಿರೂಪಣೆಯೊಂದಿಗೆ, ಕಾಪಾಲಿಕ — ಅಭಿನಯದೊಂದಿಗೆ ಗಾಯನ, ಇದೇ ತೀಜನ್‌ಬಾಯಿಯವರ ಶೈಲಿ. ಈಕೆಯೇ ಕಾಪಾಲಿಕ ಶೈಲಿಯಲ್ಲಿ ಪಾಂಡ್ವಾನಿ ಹಾಡುವ ಪ್ರಪ್ರಥಮ ಸ್ತ್ರೀ. ಹಾಡಿನೊಂದಿಗೆ ತಬಲ, ಹಾರ್ಮೋನಿಯಂ, ತಂಬೂರಿ (ಗಾಯಕರೇ ನುಡಿಸಲ್ಪಡುತ್ತದೆ) ಕೆಲಬಾರಿ ಬಾಂಜೋ, ಎಂಬ ವಾದ್ಯವೂ ಸೇರಿರುತ್ತದೆ. ಹಳ್ಳಿಯಿಂದ ಹಳ್ಳಿಗೆ ತಿರುಗಿ ಕಾರ್ಯಕ್ರಮ ನೀಡುವ ಈ ಮೇಳಗಳಿಗೆ ಹಳ್ಳಿಯವರು ಆಹಾರ ಧಾನ್ಯ, ಬಟ್ಟೆ ನೀಡುತ್ತಾರೆ.

ವಿದೇಶಗಳಿಗೆ ಭೇಟಿ ನೀಡಿರುವ ಭಾರತದ ಕಲಾವಿದರಲ್ಲಿ ತೀಜನ್‌ಬಾಯಿಯೂ ಸೇರಿದ್ದಾರೆ. ಈ ಜಾನಪದ ಕಲಾವಿದೆ, ಆಕೆಯ ಕಾರ್ಯಕ್ರಮಗಳು ಅಲ್ಲಿಯೂ ಇದೇ ಮೋಡಿ ಮಾಡಿ ಆಕೆಯ ಕೀರ್ತಿಯ ಕಿರೀಟಕ್ಕೆ ಇನ್ನಷ್ಟು ಗರಿಗಳನ್ನೂ ಸೇರಿಸಿವೆ. ಭಾರತ ಸರ್ಕಾರವೂ ಕಳೆದ ವರ್ಷ ಆಕೆಯ ಪ್ರತಿಭೆಯನ್ನು ಗುರುತಿಸಿ, ಪದ್ಮಶ್ರೀ ಪದವಿ ನೀಡಿ ಪುರಸ್ಕರಿಸಿದೆ. ವಿದೇಶಗಳಿಗೆ ಹೋಗಿ ಬಂದಿದ್ದರೂ, ಅಲ್ಲಿನ ಜನತೆಯ ಪ್ರೀತಿ ಗಳಿಸಿದ್ದರೂ, ಪದ್ಮಶ್ರೀ ಪಡೆದಿದ್ದರೂ ಜಾನಪದ ಕಲೆ ಹೇಗೆ ತನ್ನ ಗ್ರಾಮೀಣ ಶೈಲಿಯಿಂದ ಎಲ್ಲರನ್ನೂ ಮೋಡಿಗೊಳಿಸುವುದೋ ಅದೇ ಸರಳತೆ, ನಿಷ್ಕಪಟತೆ, ನಮ್ರತೆಗಳ, ಸಹಜ ವ್ಯಕ್ತಿತ್ವವನ್ನೂ ಉಳಿಸಿಕೊಂಡಿದ್ದಾರೆ.

ಫ್ರಾನ್ಸಿನಿಂದ ಹಿಂತಿರುಗಿ ಬಂದ ಮೇಲೆ, 1985ರಲ್ಲಿ ಭಿಲಾಯ್ ಉಕ್ಕಿನ ಕಾರ್ಖಾನೆಯಲ್ಲಿ ಕೆಲಸಕ್ಕೆ ನೇಮಕವಾದರು. 4 ವರ್ಷಗಳ ಸೇವೆಯ ನಂತರವೂ ಆಕೆ 3ನೇ ದರ್ಜೆಯಲ್ಲೇ ಇದ್ದರು. ಆಕೆಯ ವೇತನ, 1200ರೂ. ಕೆಲಸ ಮೇಜು, ಕುರ್ಚಿಗಳ ಧೂಳೊರೆಸುವುದು, ನೀರು ತಂದಿಡುವುದು, ಮೇಲಧಿಕಾರಿಗಳ ದರ್ಪದ ಆಜ್ಞೆ ಪಾಲಿಸುವುದು, ಇವೇ ಮುಂತಾದವು. ಕೆಲವು ಅಧಿಕಾರಿಗಳಂತೂ, ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟು ಅಪಮಾನ, ಕಿರುಕುಳ ನೀಡುತ್ತಿದ್ದರು. ಪಾಂಡ್ವಾನಿ ನಡೆಸಲು ಅಕ್ಕಪಕ್ಕದ ಊರುಗಳಿಗೆ ಹೋಗಲೂ ರಜೆ ಸಿಗುತ್ತಿರಲಿಲ್ಲ. ಇಷ್ಟಕ್ಕೂ ಆಕೆಗೆ ಆ ಕೆಲಸ ಸಿಕ್ಕಿದ್ದು ಆಕೆಯ ಮೇಲೆ ಅನುಕಂಪವಿದ್ದುದರಿಂದ ಎಂದು ಕಾರ್ಖಾನೆಯ ಒಬ್ಬ ಅಧಿಕಾರಿ ಹೇಳುತ್ತಿದ್ದರು. ಇವೆಲ್ಲ ಸುದ್ದಿ ಮಾಧ್ಯಮಗಳಿಗೆ ತಿಳಿದಾಗ, ಕಾರ್ಖಾನೆಯ ಆಡಳಿತ ವರ್ಗ ತಮ್ಮ ಪೂರ್ವಾನುಮತಿಯಿಲ್ಲದೆ ಸಂದರ್ಶನ ನೀಡಲಾಗದು ಎಂಬ ನಿಯಮ ಜಾರಿ ಮಾಡಿತು. ಆದರೆ ಇದರಿಂದ ಪರಿಸ್ಥಿತಿ ಹದಗೆಟ್ಟಾಗ ಮಧ್ಯಪ್ರದೇಶದ ಅಸೆಂಬ್ಲಿಯೇ ಆಕೆಯನ್ನು ಕಾರ್ಖಾನೆಯ ಕ್ರೀಡಾಮಂಡಳಿಗೆ ವರ್ಗಾಯಿಸಲು ಆಡಳಿತ ವರ್ಗವನ್ನು ಒತ್ತಾಯಿಸಿತು. ಅಲ್ಲಿ ಇಲ್ಲಿಗಿಂತ ಸ್ವಲ್ಪ ಉತ್ತಮ.

ತೀಜನ್ ಬಾಯಿ ಹುಟ್ಟಿದ್ದು ಛತ್ತೀಸ್ ಘರ್‌ನ ಪಾರ್ಧಿ ಜನಾಂಗದ ಚುನುತ್ ಲಾಲ್ ಪಾರ್ಧಿ ಮತ್ತು ಸುಕಮತಿ ದಂಪತಿಗಳಿಗೆ ಹಿರಿಯಮಗಳಾಗಿ ಜನಿಸಿದರು, ಭಿಲಾಯ್‌ನ ಹೊರವಲಯಕ್ಕೆ ಸೇರಿದ ಸಣ್ಣಹಳ್ಳಿ – ಅಠಾರಿಯಲ್ಲಿ. ಪಾರ್ಧಿಗಳ ಮುಖ್ಯ ಕಸುಬು — ಜೇನು ಸಂಗ್ರಹಣೆ, ಪಕ್ಷಿಗಳನ್ನು ಹಿಡಿಯುವುದು ಚಾಪೆ, ಬುಟ್ಟಿ ಹೆಣೆಯುವುದು ಇತ್ಯಾದಿ. ಆ ಜನಾಂಗದ ಇತರ ಮಕ್ಕಳಂತೆ ತೀಜನ್ ಬಾಯಿಯೂ ಶಾಲೆಗೆ ಹೋದಾಕೆಯಲ್ಲ, ತಂದೆ ತಾಯಿಗಳಿಗೆ ಹೊಲಗದ್ದೆಗಳಲ್ಲಿ, ಹೆಣಿಗೆ ಕೆಲಸಗಳಲ್ಲಿ ನೆರವು ನೀಡುತ್ತಾ ಬೆಳೆದಾಕೆ. ಈಕೆಗೆ 12ನೇ ವಯಸ್ಸಿನಲ್ಲಿ ಮದುವೆಯಾಯಿತು, ಆತನಿಗೆ ನಾಲ್ಕನೇ ಮದುವೆಯಾದಾಗ ಗಂಡನನ್ನು ತ್ಯಜಿಸಿದರು. ತಾಯಿಯ ಕಡೆಯ ಸಂಬಂಧಿ ಅಜ್ಜ ಬ್ರಿಜ್‌ಲಾಲ್‌ರಿಂದ ಈಕೆ ಪಾಂಡ್ವಾನಿಯನ್ನು ಕಲಿತರು. ಮೋಹಕ ಕಂಠ ಹೊಂದಿದ್ದ ತೀಜನ್ ಬಾಯಿಯ ಹಾಡುಗಾರಿಕೆ ಸ್ವಲ್ಪ ಸ್ವಲ್ಪವೇ ಜನರನ್ನು ಸೆಳೆಯುತ್ತಿತ್ತು. ಆಗಲೇ ಆಕೆಯನ್ನು ತುಕಾರಾಂ ವಿವಾಹವಾದದ್ದು, ಇವರ ಹಾಡುಗಾರಿಕೆಗೆ ಮನಸೋತು ಮದುವೆಯಾಗಿದ್ದರೂ, ಈಕೆ ಕಾರ್ಯಕ್ರಮಗಳಿಗೆಂದು ರಾತ್ರಿಯಿಡೀ ಮನೆಯಿಂದ ಹೊರಗೆ ಇರಬೇಕಾದ್ದರಿಂದ ಪತಿ ಪತ್ನಿಯರಲ್ಲಿ ವೈಮನಸ್ಯಕ್ಕೆ ಕಾರಣವಾಯಿತು. ಪಾಂಡ್ವಾನಿ ರಾತ್ರಿಯ ಹೊತ್ತು ನಡೆಯುವ ಕಾರ್ಯಕ್ರಮ, ತೀಜನ್ ಬಾಯಿಯವರ ಹಾಡುಗಾರಿಕೆ ಜನಪ್ರಿಯವಾಗ ತೊಡಗಿದ್ದರಿಂದ ಅಕ್ಕಪಕ್ಕದ ಹಳ್ಳಿಗಳಿಂದಲೂ ಆಹ್ವಾನವಿರುತ್ತಿತ್ತು. ಹೀಗಾಗಿ ಬರಬರುತ್ತಾ ವೈಮನಸ್ಯ ಹೆಚ್ಚಾಯಿತು. ಒಮ್ಮೆ ಪಾಂಡ್ವಾನಿ ಹಾಡುತ್ತಿದ್ದ ಸಮಯದಲ್ಲೇ ಆಕೆಯ ಪತಿ ಆಕೆಯ ಮೇಲೆ

ಹಲ್ಲೆ ಮಾಡಿದಾಗ, ಆ ಸಂಬಂಧ ಕೊನೆಯಾಗಿ ಆಕೆ ಪಾಂಡ್ವಾನಿಯನ್ನೇ ಆರಿಸಿಕೊಂಡರು.

ಮುಂದೆ ಉಮ್ಮೆದ್ ಸಿಂಗ್ ದೇಶ್‌ಮುಖ್ ಎಂಬುವರಿಂದ ಮತ್ತೂ ಹೆಚ್ಚಿನ ವಿದ್ಯೆ ಪಡೆದು, ತಮ್ಮ ಕಥನಶೈಲಿಯನ್ನು ಉತ್ತಮಪಡಿಸಿಕೊಂಡರು. 1973ರಲ್ಲಿ ಭಿಲಾಯ್‌ನ ಜಾನಪದ ಕ್ರೀಡಾ ಮಂಡಳಿಯವರು ಛತ್ತೀಸ್ ಘರ್‌ನಲ್ಲಿ ಏರ್ಪಡಿಸಿದ್ದ 'ಲೋಕ ಕಲಾ ಮಹೋತ್ಸವ' ದಲ್ಲಿ ವ್ಯವಸ್ಥಾಪಕರ ಕಣ್ಣಿಗೆ ಬಿದ್ದುದು. ನಂತರ ಭಿಲಾಯ್‌ನ ವೇದಿಕೆಯ ಮೇಲೆ ತನ್ನ ಮೊದಲ ನಿರ್ವಹಣೆಯಲ್ಲೇ ವೀಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡಿದರು. ಎತ್ತರ ನಿಲುವಿನ, ಲಕ್ಷಣವಾದ, ಆಕರ್ಷಕವಾದ ವ್ಯಕ್ತಿತ್ವದ ತೀಜನ್ ಬಾಯಿ ಛತ್ತೀಸ್‌ಘರ್‌ನ ಸಾಂಪ್ರದಾಯಿಕ ಉಡುಗೆ ತೊಡುಗೆಗಳಿಂದ ಕಂಗೊಳಿಸುತ್ತಾ, ತಂಬೂರಿಯ ಹಿಮ್ಮೇಳದೊಂದಿಗೆ, ಸಂದರ್ಭಾನುಸಾರ ಭಾವಗಳನ್ನು ಮುಖದಲ್ಲಿ ಹೊಮ್ಮಿಸುತ್ತಾ ಆಕೆ ಪಾಂಡ್ವಾನಿಯನ್ನು ಹಾಡುತ್ತಿದ್ದರು.

ನೀರವ ರಾತ್ರಿಯಲ್ಲಿ, ಪೌರಾಣಿಕ ಪಾತ್ರಗಳಿಗೆ ಮಧುರ ಕಂಠದಿಂದ ಜೀವ ತುಂಬುತ್ತಾ, ಭೀಮನ ಪೌರುಷ, ಅರ್ಜುನನ ಶೌರ್ಯ, ದ್ರೌಪದಿಯ ಹತಾಶೆ, ಕುಂತಿಯ ಪ್ರೀತಿ ವಾತ್ಸಲ್ಯ, ಕರ್ಣನ ಸಮರ್ಪಣಾ ಭಾವ, ದುರ್ಯೋಧನನ ಅಹಂ, ಕೀಚಕನ ವಿಷಯ ಲಂಪಟತನ, ಇವುಗಳನ್ನು ನೋಡುಗರ ಮನಸ್ಸಿಗೆ ಪರಿಣಾಮಕಾರಿಯಾಗಿ ತಟ್ಟುವಂತೆ ಅಭಿನಯಿಸುತ್ತಾ, ತಮ್ಮ ಕೋಮಲ ಕರಗಳಲ್ಲಿನ ತಂಬೂರಿಯನ್ನೇ ಸಂದರ್ಭಕ್ಕೆ ತಕ್ಕಂತೆ ಗಧೆ, ಬಿಲ್ಲು, ಖಡ್ಗವನ್ನಾಗಿ ಬಳಸುತ್ತಾ, ಒಟ್ಟಿನಲ್ಲಿ ಪ್ರೇಕ್ಷಕರನ್ನು ತಮ್ಮ ಪ್ರತಿಭಾಪೂರ್ಣ ಅಭಿನಯದಿಂದ ಸಂಮೋಹನಗೊಳಿಸುವ ಇಂಥ ಮತ್ತೊಂದು ಪಾಂಡ್ವಾನಿ ಕಲಾವಿದೆ ಈಗ ಮತ್ತಾರೂ ಇಲ್ಲ. ಈಗ ತೀಜನ್ ಬಾಯಿಯಷ್ಟು ಬೇಡಿಕೆಯಿರುವ ಮತ್ತೊಬ್ಬ ಕಲಾವಿದರಿಲ್ಲ. ಆಕೆಯ ಕ್ಯಾಸೆಟ್‌ಗಳೂ ಜನಪ್ರಿಯ. ಭಿಲಾಯ್ ಉಕ್ಕಿನ ಕಾರ್ಖಾನೆಯ ಆಡಳಿತ ವರ್ಗ ಆಕೆಯ ವ್ಯಕ್ತಿಚಿತ್ರವನ್ನೂ ತಯಾರಿಸಿದೆ. ದೂರದರ್ಶನದಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಈಗ ಆಕೆ ತಮ್ಮ ಮಕ್ಕಳು, ಮೂರನೇ ಪತಿ ತುಲಸೀ ರಾಂ ದೇಶ್‌ಮುಖ್ (ಹಾರ್ಮೋನಿಯಮ್ ವಾದಕ) ಇವರೊಂದಿಗೆ ಕಾರ್ಖಾನೆಯ ಕ್ವಾರ್ಟರ್ಸ್‌ನಲ್ಲಿ ವಾಸವಾಗಿದ್ದಾರೆ. ತಮ್ಮದೇ ಆದ ಜಮೀನನ್ನೂ ಹೊಂದಿ ಇಷ್ಟೆಲ್ಲ ಕೀರ್ತಿ, ಗೌರವ, ಅತ್ಯುತ್ತಮ ಕಲಾವಿದೆಯೆಂಬ ಹೆಗ್ಗಳಿಕೆ, ಜನಪ್ರಿಯತೆಯಿದ್ದರೂ ಆಕೆ ಮಾತ್ರ ಸರಳಜೀವಿ.

ಗೀತಾ ಜಿ. ಎಸ್.

ಹಣತೆ

ನಾನು......!
ದೂರದಿಂದ ಬಂದವಳು
ಈ ಮನೆಗೆ:
ದೂರುವರು ಇವರುಗಳು
ನಾ ಮೀನಾದೆ, ಇವರ ಬಲೆಗೆ
ಈ ಮನೆಯ ಕೆಲಸ ಕಾರ್ಯಕೆ
ನಾನೊಂದು ಜೀತದಾಳು
ಬಂದವರು ಇದ್ದವರು ನೋಡರು
ನನ್ನೀ ನೋವಿನ – ಸಾವಿನ ಬಾಳು
ನನ್ನದೊಂದು ಸಮರ ಜೀವ,
ಸಾಯದೆ ಚಿಗುರಿದರೆ.
ಸೋಲದೆ ಗೆದ್ದರೆ?
ಪತಿಯ ಪ್ರೀತಿಯ ಗುಡಿಯ ಒಳಗೆ
ಈ ಮನೆಯ ಗಡಿಯ ನಡುವೆ
ನಾನಾಗ ಆದರ್ಶ ಪತಿವ್ರತೆ!
ದೂರದಿಂದ ಬಂದವಳು
ನಾ ... ಈ ಮನೆಗೆ
ಬೆಳಗುವ ಹಣತೆ
ನನ್ನ ನಾನು ದಹಿಸಿಕೊಂಡು
ನೀಡಬೇಕು ಬೆಳಕು
ಎಷ್ಟೆಂದರು ನಾ ಹೆಣ್ಣು!
ನನ್ನ ನೆಲೆ ಕತ್ತಲೆಯು
ಜೀವಮಾನ,
ಎಲ್ಲಾ ಇದ್ದು. ಎಲ್ಲರೂ ಇದ್ದು
ನಾಬಂಜೆಯು ಹಾಗೆ!

ರತ್ನಾತನಯ ಮಂಜು.

ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರ ದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿ ರುವ ದೃಷ್ಟಿಕೋನಗಳು ಬದಲಾಗುತ್ತಿವೆಯಲ್ಲವೆ? ಇಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾ ಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗು ಅನುಭವಗಳನ್ನು ಪುಟ್ಟ ಲೇಖನದ ರೂಪ ದಲ್ಲಿ ಬರೆದು ಕಳಿಸಿದ ಲೇಖನಗಳಿಗೆಂದು "ಮೌನ ಮಾತಾದಾಗ" ಅಂಕಣವಿದೆ. ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗು ವುದು.

ಸಂ. ಮಂ.

ಲೀಲಾ ನನ್ನ ಆತ್ಮೀಯ ಗೆಳತಿ. ಬಾಲ್ಯದಿಂ ದಲೂ ವ್ಯಾಸಂಗದ ಕೊನೆಯ ಹಂತದವರೆಗೂ ನಾವು ಆತ್ಮೀಯ ಒಡನಾಡಿಗಳಾಗಿದ್ದೆವು. ಮನೆಯವರೆಲ್ಲರ ಅಕ್ಕರೆಯ ಕಣ್ಮಣಿಯಾಗಿ ಬೆಳೆದ, ಉತ್ತಮ ಹುದ್ದೆ ಯಲ್ಲಿದ್ದ, ಸದ್ಗುಣ ಸಂಗಾತಿಯನ್ನೂ ಪಡೆದ ನನ್ನ ಗೆಳ ತಿಯು ಸುಖದ ಸುಪ್ಪತ್ತಿಗೆಯಲ್ಲಿ ಬದುಕುತ್ತಿದ್ದಾಳೆಂದೆ ನಾನು ಭ್ರಮಿಸಿದ್ದೆ. ಆದರೆ ಇಂದು ಅವಳ ನೊಂದ ಮನದಳಲಿನ ಪತ್ರ ನನ್ನ ಮುಂದಿದೆ.

ಲೀಲಾ ಹುಚ್ಚು ಆದರ್ಶಗಳ ಕನಸುಗಳನ್ನು ಹೆಣೆ ಯುತ್ತ ಬೆಳೆದವಳು. ಮನೆಯವರೆಲ್ಲರ ಬಲವಂತಕ್ಕೆ ಮದುವೆಯಾಗಲು ಒಪ್ಪಿಗೆ ನೀಡಬೇಕಾಯಿತು. ಅವ ಳನ್ನು ಚೆನ್ನಾಗಿಯೇ ಅರಿತ ಸಂಬಂಧಿಗಳಾದವರೇ, ಅವ ಳಿಗೆ ಪತಿಯಾಗಿ ದೊರೆತಾಗ ಅವಳ ಆದರ್ಶಗಳಿಗೆ ರೆಕ್ಕೆ ಜೋಡಿಸಿ ಕಲ್ಪನೆಯಲ್ಲಿ ಹಾರಾಡಿದಳು ಲೀಲಾ. ಆದರೆ ಸಂಸಾರದ ನೊಗಕ್ಕೆ ಹೆಗಲು ಕೊಟ್ಟಾಗ ರೆಕ್ಕೆ ಕಳ ಚಿದ ಪಕ್ಷಿಯಾಗಿದ್ದಳವಳು

ಸ್ನೇಹಮಯಿಯಾದ, ಉತ್ತಮ ವಾಗ್ಮಿಯಾದ' ಉನ್ನತ ಹುದ್ದೆಯಲ್ಲಿರುವ ಲೀಲಾಳನ್ನು ಸಭೆ ಸಮಾ ರಂಭಗಳಿಗೆ ಆಹ್ವಾನಿಸುತ್ತಾರೆ, ಅಂತಹ ಸಭೆ ಸಮಾ ರಂಭಗಳಲ್ಲಿ ಭಾಗವಹಿಸಿ ಬಂದ ಇರುಳು ಮನೆ ಕುರು ಕ್ಷೇತ್ರವಾಗುತ್ತದೆ. ಹೆಣ್ಣು ತನ್ನ ಪತಿಯ ಕೀರ್ತಿ ಯನ್ನು ಎಷ್ಟೊಂದು ಹೆಮ್ಮೆಯಿಂದ ಹೇಳಿಕೊಳ್ಳಲು ಹಾತೊರೆಯುತ್ತಾಳೆ. ಅದೇ ಪ್ರತಿಭೆಯನ್ನು ಸಹಿಸು ವುದಿಲ್ಲ ಈ ಪುರುಷ ಪ್ರಧಾನ ಸಮಾಜ. ಹೀಗೇಕೆ?

ನನ್ನ ಗೆಳತಿಯ ಮೇಲೆ ಬಂದ ಆರೋಪಗಳು ಒಂದೆರಡಲ್ಲ, ಅವಳು ಎಂತಹ ಆರೋಪಗಳನ್ನಾದರೂ ಸಹಿಸಬಲ್ಲಳು ಆದರೆ ಅವಳ ಚಾರಿತ್ರ್ಯವಧೆಯನ್ನು ಮಾತ್ರ ಅವಳಿಗೆ ಸಹಿಸಲುಸಾಧ್ಯ. ಅವಳ ಆದರ್ಶ ಅಭಿರುಚಿಗಳ ಪರಿಚಯವಿರುವ ಪತಿ ಅವಳ ಮೇಲೆ ಇಂತಹ ಆರೋಪ ಹೋರಿಸುತ್ತಾರೆ. ವಿದ್ಯಾವಂತ ರಾದ, ಉತ್ತಮ ಮನೆತನದಲ್ಲಿಹುಟ್ಟಿದ ಅವರ ದಾಂಪತ್ಯ ಜೀವನ ಒಂದು ರೀತಿ ಅಧೋಗತಿಗಿಳಿಯುತ್ತಿದೆ.

ನನ್ನ ಗೆಳತಿ ಇಂದು ಆಯ್ಕೆಯ ಸಂಕ್ರಮಣ ಸ್ಥಿತಿಯಲ್ಲಿ ಬದುಕುತ್ತಿದ್ದಾಳೆ. ಅವಳ ಗಂಡ, "ನಿನ್ನೆಲ್ಲ ಆದರ್ಶಗಳನ್ನೂ ಮರೆತು, ಸಭೆ ಸಮಾರಂಭಗಳಿಗೆ ಹೋಗದೆ, ಮನೆಯ ಜವಾಬ್ದಾರಿಯನ್ನು ನೋಡಿ ಕೊಂಡು ಮನೆಯಲ್ಲಿ ಇರುವುದಾದರೆ ಮಾತ್ರ ಇರು" ಎಂದು ಆಜ್ಞೆ ಮಾಡಿದ್ದಾರೆ. ತನ್ನಲ್ಲಿರುವ ಪ್ರತಿಭೆಗೆ ತಿಲಾಂಜಲಿಯಿಟ್ಟು ಪತಿಯ ಔದಾರ್ಯದ ನೆರಳಲ್ಲಿ ಉಸಿರಾಡುವ ಶವದಂತೆ ಬಾಳಬೇಕಾಗಿದೆ ನನ್ನ ಗೆಳತಿ.

ಅವಳ ಬದುಕು ಇಂದು ಗೊಂದಲಮಯವಾ ಗಿದೆ. ಅವಳ ಎರಡು ಕರುಳಬಳ್ಳಿಗಳಿಂದ ಬದುಕು ಇಂದು ಸಂಕೀರ್ಣದ ಆಯಾಮ ಪಡೆದಿದೆ. ಎಳೆಯ ಮಕ್ಕಳನ್ನು ಮಧ್ಯದಲ್ಲಿಟ್ಟುಕೊಂಡು ನಾವುಗಳು ಹುಚ್ಚುನಾಯಿಯಂತೆ ಕಚ್ಚಾಡಿಕೊಂಡರೆ ಎಳೆ ಮಕ್ಕಳ ಮನಸಿನ ಮೇಲೆ ಯಾವ ರೀತಿಯ ಪರಿಣಾಮ ಬೀರ ಬಹುದೆಂಬ ಅಳುಕು ಅವಳ ಹೃದಯವನ್ನು ಕಲಕುತ್ತಿವೆ ಮಾತ್ರವಲ್ಲ ಭವಿಷ್ಯದ ಅಂಧಕಾರವನ್ನು ನೆನೆದು ಹೃದ ಯ ಉಮ್ಮಳಿಸಿ ಬರುತ್ತಿದೆ.

ಅವಳೊಡಲ ಕಂದಮ್ಮಗಳ ಬದುಕು ನಿಶ್ಚಿಂತೆಯಿಂದ ಸಾಗಬೇಕಾದರೆ ತ್ಯಾಗ ಮನೋಭಾವನೆ ಅನಿವಾರ್ಯವೆ? ಒಂದು ಕಡೆ ಅವಳ ವ್ಯಕ್ತಿತ್ವದ ಪ್ರಶ್ನೆ, ಇನ್ನೊಂದು ಕಡೆ ಅವಳ ಕರುಳಕುಡಿಗಳ ಸೆಳೆತ. ಈ ದ್ವಂದ್ವಕ್ಕೆ ಪರಿಹಾರವೇನು? ಇದು ಕೇವಲ ನನ್ನ ಗೆಳತಿ ಲೀಲಳ ಪ್ರಶ್ನೆ ಮಾತ್ರವಲ್ಲ, ಆರ್ಥಿಕ ಸ್ವಾವಲಂಬನೆಯುಳ್ಳ ಸ್ತ್ರೀಯರಿಗೆ ಸ್ವತಂತ್ರವಾಗಿ ಬಾಳುವ ಅವಕಾಶವಿದೆಯೆಂದು ಅಂತಹ ಅವಕಾಶಗಳಿಲ್ಲದ ಸ್ತ್ರೀಯರು ವಾದಿಸುತ್ತಾರೆ. ಸ್ವತಂತ್ರವೆಂದರೆ ಮದುವೆಯಿಲ್ಲದೆ, ಮಕ್ಕಳಿಲ್ಲದೆ ಇರುವುದೆ?

ಶೋಷಣೆಯ ಸರಮಾಲೆಗೆ ಕೊರಳೊಡ್ಡುವುದೆ ಮಹಿಳೆಗೆ ಯುಗಯುಗಕ್ಕೂ ದೊರೆತ ಕೊಡುಗೆಯೇ? ವಿದ್ಯೆಕಲಿತ ಉದ್ಯೋಗದಲ್ಲಿರುವ ಹೆಣ್ಣಿನ ಪರಿಸ್ಥಿತಿಯೇ ಹೀಗಾದ ಮೇಲೆ ಇನ್ನು ಸಾಮಾನ್ಯ ಮಹಿಳೆಯರ ಗತಿಯೇನು? ಮಹಿಳಾ ಸಮುದಾಯ ತನ್ನ ನೋವು ನಲಿವುಗಳಿಗೆ ಸ್ಪಂದಿಸಿ ಸಹಕರಿಸಿ, ಒಗ್ಗೂಡಿದರೆ ಇಂತಹ ಭೀಕರ ಸಮಸ್ಯೆಗಳ ಪರಿಹಾರ ಸಾಧ್ಯವೆ?

ಲಲಿತಜ ಮಲ್ಲಾರ

ಕಾನೂನು

ತನಗಾದ ಅನ್ಯಾಯವನ್ನು ಪ್ರತಿಭಟಿಸಿ ನ್ಯಾಯಾಲಯದ ಕಟ್ಟೆ ಹತ್ತಿ ನ್ಯಾಯ ಕೇಳುವ ಮಹಿಳೆಗೆ ಎದುರಾಗುವುದು ನಿರಾಶೆ, ಹತಾಶೆ, ಹಿಂಸೆ. ನ್ಯಾಯಾಂಗ ವ್ಯವಸ್ಥೆಯಲ್ಲುಂಟಾಗುತ್ತಿರುವ ವಿಳಂಬ ಗತಿ ಮಹಿಳೆಯರ ಜೀವನವನ್ನು ಕುಗ್ಗಿಸಿಬಿಡುತ್ತದೆ. ಇತ್ತೀಚೆಗೆ ಮದರಾಸಿನಲ್ಲಿ ಮಹಿಳೆಯರು ಮೊಕದ್ದಮೆಗಳನ್ನು ಶೀಘ್ರವಾಗಿ ಮುಗಿಸುವಂತೆ, ಪರಿಹಾರ ದ್ರವ್ಯವನ್ನು ಆದಷ್ಟು ನಿಯಮಿತವಾಗಿ ಕೊಡಿಸಬೇಕು, ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಮೊತ್ತವನ್ನೂ ನೀಡಬೇಕೆಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಉಪವಾಸ ಮಾಡಲು ಹೊರಟಿದ್ದಾಗ, ಕೌಟುಂಬಿಕ ನ್ಯಾಯಾಲದ ಆವರಣದಲ್ಲೇ ಮುಷ್ಕರ ಆರಂಭಿಸುವ ಮುನ್ನವೇ ಬಂಧನಕ್ಕೊಳಗಾದರು. 10 ಮಂದಿ ಇದ್ದ ಈ ಗುಂಪಿನಲ್ಲಿ 20ರಿಂದ 40ವಯಸ್ಸಿನೊಳಗಿನ ಮಹಿಳೆಯರೇ ಇದ್ದರು. ಇವರೆಲ್ಲ ಮುಸ್ಲಿಂ ಹಾಗೂ ಹಿಂದೂಗಳೇ. ಒಬ್ಬಾಕೆಯ ಕಂಕುಳಲ್ಲಿ ಒಂದು ವರ್ಷದ ಮಗುವೂ ಇತ್ತು.

ಈ ಚಳುವಳಿಯ ಬಗ್ಗೆ ಪೊಲೀಸರಿಗೆ ಮೊದಲೇ ತಿಳಿದಿತ್ತಿದ್ದರಿಂದ ಈ ಸಂಘಟನೆಯ ಚಾಲನಶಕ್ತಿಯಾದ ಪಾತಿಮಾಮುತ್ತು ತೆಹಿರಾರವರನ್ನು ಹಿಂದಿನ ರಾತ್ರಿಯೇ ಬಂಧಿಸಿ, ಈ ಸದ್ದೃವಿ ಮಹಿಳೆಯರಿಗೆ ತಮ್ಮದೇ ಆದ ಕಾಣಿಕೆ ನೀಡಿದ್ದರು. ಪಾತಿಮಾಮುತ್ತು ತೆಹಿರಾರವರೂ ಪೋಷಣಾ ವೆಚ್ಚಕ್ಕಾಗಿ ಸಲ್ಲಿದ್ದ ಅರ್ಜಿ ಕೌಟುಂಬಿಕ ನ್ಯಾಯಾಲಯದ ಕಡತದಲ್ಲಿ ಸೇರಿಹೋಗಿದೆ. ಬಂಧನಕ್ಕೊಳಗಾದ ಹೆಂಗಸರು ತಮ್ಮ ಕಥೆಗಳನ್ನು ಕರುಳು ಮಿಡಿಯುವಂತೆ ಹೇಳುತ್ತಿದ್ದರು.

30ರ ಹಮೀನಾ ಬೇಗಂರ ಗಂಡ ತಲಾಕ್ ಎಂದು 3ಸಲ ನುಡಿದು ಹೆಂಡತಿಯನ್ನು ಬಿಟ್ಟವ, ಮಗುವಿನ ಪೋಷಣೆಗೆ ಕಾನೂನಿನಂತೆ ಪ್ರತಿ ತಿಂಗಳೂ ಕೊಡಬೇಕಾಗಿದ್ದ 50ರೂ. ಗಳನ್ನು ಕೊಡದಿದ್ದುದರಿಂದ ಆಕೆ ಕುಟುಂಬ ನ್ಯಾಯಾಲಯಕ್ಕೆ ನ್ಯಾಯ ಬೇಡಿ ಬಂದಿದ್ದರು. ಉಷಾರಾಣಿಯ ಕಥೆಯೂ ಇದೆ. 20ವರ್ಷದ ಆಕೆ ತನ್ನ ಗಂಡನ ಕಣ್ಣಿಗೆ ಚೆಂದವಾಗಿ ಕಾಣಲಿಲ್ಲವೆಂಬ ಕಾರಣಕ್ಕಾಗಿ ಗಂಡ ವಿಚ್ಛೇದನ ನೀಡಿದ್ದ. ಮದರಾಸಿನ ವಿದ್ಯುತ್ ಸರಬರಾಜು ಇಲಾಖೆಯಲ್ಲಿ ನೌಕರನಾಗಿರುವ ಆತನಿಂದ ಉಷಾರಾನಿಗೆ ಪ್ರತಿತಿಂಗಳು 275ರೂ. ಬರುವುದಿತ್ತು.

ಈ ಮಹಿಳೆಯರ ಮುಖ್ಯ ಪ್ರಶ್ನೆಗಳೆಂದರೆ, ಈ ಮೊಕದ್ದಮೆಗಳು ಏಕಿಷು ವಿಳಂಬಗತಿಯಲ್ಲಿ ನಡೆಯುತ್ತಿವೆ? ವರ್ಷಗಟ್ಟಲೆ ಈ ಮೊಕದ್ದಮೆಗಳನ್ನು ನಡೆಸುವ ಉದ್ದೇಶವೇನು? ತಪ್ಪಿತಸ್ಥರಿಗೆ ಶಿಕ್ಷೆ ನೀಡುತ್ತಿಲ್ಲ ಏಕೆ? ಪೋಷಣಾ ವೆಚ್ಚಕ್ಕಾಗಿ ದಿನವಿಡೀ ಕೋರ್ಟಿನಲ್ಲಿ ಕಾಯಿಸುವುದಾದರೂ ಏಕೆ?

ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಎಸ್. ಸೋಮಸುಂದರಂ ಹೇಳುತ್ತಾರೆ, ತಕವು ದಿನಕ್ಕೆ 8ಗಂಟೆಗಳವರೆಗೆ ದುಡಿದರೂ, ಭಾನುವಾರದಂದೂ ಕೆಲಸ ಮಾಡಿದರೂ ಮೊಕದ್ದಮೆಗಳ ಸಂಖ್ಯೆ ಬಹಳವಿರುವುದರಿಂದ ಈ ವಿಳಂಬ ಅನಿವಾರ್ಯವೆಂದು. ಸುಮಾರು 3000 ಮೊಕದ್ದಮೆಗಳು ವಿಚಾರಣೆಗಿವೆ ಎನ್ನುತ್ತಾರೆ ಅವರು.

ಪೋಷಣಾ ವೆಚ್ಚವನ್ನು ನೀಡದ ಗಂಡಂದಿರ ವೇತನದಲ್ಲಿ ಆ ಹಣವನ್ನು ಮುರಿದುಕೊಂಡು ಹೆಂಗಸರಿಗೆ ಕೊಡಿಸುವ ಅಧಿಕಾರ ಕೋರ್ಟಿಗಿದೆ. 800 ಮಂದಿ ತಪ್ಪಿತಸ್ಥರಿಗೆ ಜಾಮೀನುರಹಿತ ವಾರಂಟ್, ಜಪ್ತಿ ಮುಂತಾದ ಆಜ್ಞಾ ಕ್ರಮಗಳನ್ನು ತೆಗೆದುಕೊಂಡರೂ 2 ಕೇಸುಗಳಲ್ಲಿ ಮಾತ್ರ ಪೊಲೀಸರು ಯಶಸ್ವಿಯಾಗಿದ್ದಾರೆ. ಅದಕ್ಕೆ ಹೈಕೋರ್ಟಿನಿಂದ ತಡೆಯಾಜ್ಞೆಯನ್ನು ತರಲಾಯಿತು.

ಕೆಲವು ಸಮೀಕ್ಷೆಯ ಪ್ರಕಾರ ಶೇ. 25 ರಷ್ಟು ಮಂದಿ ಸರಿಯಾಗಿ ಪೋಷಣೆ ವೆಚ್ಚವನ್ನು ನೀಡುತ್ತಿದ್ದಾರೆ, ಕೋರ್ಟಿನ ಮೂಲಕ. ಮತ್ತೆ ಶೇ. 50 ರಷ್ಟು ಮಂದಿ ವಿಚ್ಛೇದನ ನೀಡಿದ ಗಂಡಂದಿರು ವೇತನದಲ್ಲಿ ಮುರಿದುಕೊಳ್ಳಲಾಗುತ್ತಿದೆ.



ಸಂವೇದನೆ

ಸ್ನೇಹಿತ ಪರಮೇಶ್ ನಾಟಕ "ತಬ್ಬಲಿ" ನೋಡಲು ಹೋಗಿದ್ದೆ. ಆ ದಿನ ಮನೆಗೆ ಬಂದಾಗ ಗಂಟೆ ಹನ್ನೊಂದು ಸಮೀಪಿಸುತ್ತಿತ್ತು. ಬಸ್ ತುಂಬಿ ಚೆಲ್ಲುತ್ತಿದ್ದ ಜನ, ಉರಿಯುವ ಸೆಕೆಯೊಂದಿಗೆ ಅಂಟುವ ಬೆವರು ಸೇರಿ ಮೈಪರಚಿಕೊಂಡು, ತಲೆಕೂದಲು ಕಿತ್ತುಕೊಳ್ಳುವಂತಾಗುತ್ತಿತ್ತು. ಈ ಯಾವುದರ ವಾಸನೆಯೂ ಇಲ್ಲದ ಡ್ರೈವರ್ ಕೆಳಗೆ ಗಾಳಿಯಲ್ಲಿ ಆರಾಮವಾಗಿ ನಿಂತಿದ್ದ. ಗಂಟೆ ೧೦.೨೦ ಆದರೂ ಹೊರಡುವ ಸೂಚನೆಯೇ ಇಲ್ಲ. ಮನೆ ತಲುಪುವುದು ಎಷ್ಟು ಹೊತ್ತಾಗುತ್ತೊ ಎಂಬ ಯೋಚನೆ, ಜೊತೆಗೆ ನನ್ನ ಗೆಳತಿಯರಿಬ್ಬರೂ ಬಸ್ ನಿಲ್ದಾಣದಿಂದ ಸ್ವಲ್ಪ ದೂರ ನಡೆಯಬೇಕಾಗಿತ್ತು. ಮನಸ್ಸಿನೊಂದಿಗಿ ಮೈಯೂ ಉರಿಯುತ್ತಿತ್ತು. ಈ ಕಲಾಕ್ಷೇತ್ರದ ಜನಕ್ಕೆ ೬ ಗಂಟೆಗೆ ನಾಟಕ ಇಡೋಕೆ ಏನಾಗಿರೋದು. ಗಂಡಸ್ರಷ್ಟೇ ನೋಡಬೇಕು ನಾಟಕಾನ. ಇಲ್ಲ ಇವರ ಹಿಂಬದಿಲೋ ಪಕ್ಕದಲ್ಲೋ ಗಾಡೀಲಿ ಕೂತುಹೋಗಬೇಕು. ಎಷ್ಟು ಮಹಾ ಹುಡುಗೀರು ಗಾಡಿ ಇಟ್ಟುಕೊಂಡಿದ್ದಾರೆ ಹೋಗಿಬರಲು? ನಾಟಕ ನೋಡೋ ಆಸೆಯಿಂದ ಬಸ್ಸಲ್ಲೋ, ಗಾಡಿಯಲ್ಲೋ ಹೋಗಿ ನಾಟಕ ಮುಗಿಸಿಕೊಂಡು ೧೦ ಗಂಟೆ ಹೊತ್ತಿಗೆ ಹೋಗಲು ಯುಧಿಷ್ಟಿರ ಜನ್ಮ ತಳೆದ ನಾಡಿದು. ಎಲ್ಲಾ ಕೃಷ್ಣ ದುರ್ಯೋಧನನ ಸಂತತಿಯೋರು........ ಈ ಎಲ್ಲ ಯೋಚನೆಗಳು ಕುಟ್ಟತೊಡಗಲನುವಾಗುವುದರೊಂದಿಗೆ ತಲೆ ಸಿಡಿತವೂ ಶುರುವಾಯಿತು. ಅಂತೂ ಚಾಲಕ ಹೊರಡಲನುವಾದ. ಮನೆ ತಲುಪುವ ವೇಳೆಗೆ ೧೦.೫೦. ಹೊಟ್ಟೆ ತುಂಬಾ ಉಂಡು, ಫ್ರೆಷ್ ಆಗ ಬೇಕೆನಿಸಿ ತಣ್ಣನೆ ಗಾಳಿಗೆ ಮೈಯೊಡ್ಡಿ ಮಲಗಿದ್ದ ಹಾಗೆ ತಾರೆಗಳನ್ನು ಎಣಿಸುತ್ತಾ ಚಲುವ ಜ್ಞಾಪಕಕ್ಕೆ ಬಂದು ನನ್ನ ಬಾಲ್ಯಕ್ಕೆ ಹಾಗೇ ತೇಲಿ ಹೋದೆ.

ವಯಸ್ಸು ಜ್ಞಾಪಕವಿಲ್ಲ, ಓದುತ್ತಿದ್ದ ಕ್ಲಾಸು ಜ್ಞಾಪಕವಿಲ್ಲ. ಜ್ಞಾಪಕ ಇರೋದು ಗಾಂಧೀಜಿ ಪಾಠಕ್ಕೆ ಸಂಬಂಧಪಟ್ಟ ಆ ಘಟನೆಯೇ. ಟೀಚರ್ ಹೇಳ್ತಾ ಇದ್ರು ಗಾಂಧೀಜಿ ಸರಳ, ಪ್ರಾಮಾಣಿಕ ವ್ಯಕ್ತಿ. ಸ್ವಾವಲಂಬಿ, ನೂಲುತ್ತಿದ್ದರು ಕಕ್ಕಸ್ಸು ತೊಳೆಯುತ್ತಿದ್ದರು, ತಮ್ಮ ಚಪ್ಪಲಿ ತಾವೇ ಹೊಲೆದು ಕೊಳ್ಳುತ್ತಿದ್ದರು, ಆಡಿನಹಾಲು ಕಡ್ಲೆಕಾಯಿ ಅವರ ಆಹಾರ ತುಂಡು ಪಂಚೆ, ತುಂಡು ಹೊದಿಕೆಯೊಂದಿಗೆ ದೇಶಕ್ಕೆ ಸ್ವತಂತ್ರ ತಂದರು. ದೇಶಕ್ಕಾಗಿ ಪ್ರಾಣತೆತ್ತರು ಹೀಗೆ ಇನ್ನು ಅನೇಕ ವಿಷಯಗಳು. ನಾನು ಶ್ರದ್ಧೆಯಿಂದ ಕಿವೀಗೆ ಹಾಕ್ಕೊತ್ತಿದ್ದೆ. ಗಾಂಧೀಜಿ ಬಗ್ಗೆ ಎಲ್ಲಿಲ್ಲದ ಗೌರವ ಹುಟ್ಟಿಕೋತು. ಟೀಚರ್ ಹೇಳೋ ಹಾಗೇ ನಾನು ಅವರ ಹಾಗೇ ಆಗಬೇಕೆಂದು ಯೋಚಿಸುತ್ತಿದ್ದೆ. ಅದೇ ಗುಂಗು ಮನೆಗೆ ಬರುವವರೆಗೂ. ತಲೆತುಂಬಾ ಹೇಗೆ ಅವರಂತಾಗೋದು ಎಂದು ಯೋಚಿಸುತ್ತಿದ್ದೆ. ನೂಲೋಕೆ ಚರಕ ಇಲ್ಲ, ಹಾಕ್ಕೋತಾ ಇದ್ದದ್ದು ಒಳ್ಳೆ ರೇಶ್ಮೆ, ಹತ್ತಿಬಟ್ಟೆ. ತುಂಡು ಹೆಂಗೆ ಉಡಲಿ? ಆಡಿನ ಹಾಲು ಸಿಗೋಲ್ಲ, ಕಡ್ಲೆಕಾಯಿ ಇಷ್ಟ ಇಲ್ಲ. ಏನು ಮಾಡೋದು? ಕೊನೆಗೆ ಉಳಿದ್ದದ್ದು ಚಪ್ಪಲಿ ಹೊಲಿದು ಕೊಳ್ಳೋದು. ಹೊಳೆದಿದ್ದೆ ತಡ ತಗಂಡೆ ಪುಸ್ತಕ ಹೊಲಿಯೋ ಸೂಜಿ, ಪೋಣಿಸ್ದೆ ಎಂಟೆಳೆ ದಾರ ಭದ್ರವಾಗಿ ಒಂದು ಗಂಟು ಬಿಗಿದು, ನಾ ಇನ್ನೇನು ಗಾಂಧಿಗೆ ಸಮಾನ ಅಂತ ತಗೊಂಡೆ ಕೈಗೆ ಉಂಗುಟ

ಉದ್ಯೋಗವಿಲ್ಲದವರಲ್ಲಿ ಶೇ. 10 ರಷ್ಟು ಮಂದಿ ಮಾತ್ರ ಪೋಷಣಾ ವೆಚ್ಚವನ್ನು ನೀಡಿದರೆ ಉಳಿದ ಶೇ. 15 ರಷ್ಟು ಮಂದಿ ಆ ಗೊಡವೆಗೇ ಬಾರದೆ ನುಣುಚಿಕೊಂಡಂತವರು.

ಕಾನೂನು ತಜ್ಞರ ಹೇಳಿಕೆಯಂತೆ ಕಾರ್ಯವಿಧಾನದಲ್ಲೆ ತಪ್ಪಿರುವುದರಿಂದ ಈ ವಿಳಂಬ ಉಂಟಾಗುತ್ತದೆ. ಸಾವಿರಾರು ಮಂದಿ ಮಹಿಳೆಯರು, ಮಕ್ಕಳು ಮತ್ತೊಂಬ್ಬರ ಅನುಕಂಪಕ್ಕಾಗಿ ಕಾಯುವ ಪರಿಸ್ಥಿತಿಯ ಬಗ್ಗೆ ನ್ಯಾಯಾಂಗ ವ್ಯವಸ್ಥೆಯ ಚೌಕಟ್ಟಿನಲ್ಲಿ ಬರುವ ಪ್ರತಿಯೊಬ್ಬರು ಕಣ್ಣು ತೆರೆದು ನೋಡಬೇಕಾಗಿದೆ.

ಕಿತ್ತೋಗಿದ್ದ ಚಪ್ಪಲಿನ. ಒಳ್ಳೆ ಬಾಟ ಚಪ್ಪಲಿ ಸೂಜಿ ಒಳಗೆ ಹೋಗೊಲ್ಲ, ತಾಳ್ಮೆಯಿಂದ ಪ್ರಯತ್ನಿಸಿ ಸೂಜಿ ತೂರಿಸಿದೆ, "ಅಬ್ಬಾ! ಬಂತು" ಅನ್ನೋ ವೇಳೆಗೆ ಬಿತ್ತು ತಲೆಗೊಂದೇಟು. ಯಾರು ಅಂತ ನೋಡಿದರೆ ಆವಾಗ್ತಾನೇ ಆಫೀಸಿನಿಂದ ಬಂದಿದ್ದ ನಮ್ಮಪ್ಪ, ಜೊತೇಗೆ ನನ್ನಣ್ಣ. "ಯಾವ ಸಂಸ್ಕೃತಿಯಿಂದ ಬಿಡಿಸಬೇಕು ಅಂತೀನೋ ಅದೇ ಸಂಸ್ಕೃತಿಯ ಮೂಲಕ್ಕೆ ಹೋಗ್ತೀಯ" ಅಂದ್ರು. ವಿಪರೀತ ಆಶ್ಚರ್ಯ ದುಃಖ. ನನ್ನ ಮಹಾನ್ ಕಾರ್ಯಕ್ಕೆ ಬೆನ್ನು ತಟ್ಟುವ ಬದಲು ಒದೆ! ತಲೇಲಿ ಪ್ರಶ್ನೆಗಳ ಥಕಧಿಮಿ. ಎಲಾ! ಗಾಂಧೀಜಿ ಹೇಳೋದನ್ನೆ ನಮ್ಮಪ್ಪ ತಪ್ಪ ಅಂತಾರಲ್ಲ! ಗಾಂಧೀಜಿ ತಪ್ಪ? ಛೆ! ಇಲ್ಲ. ಮತ್ತೆ ನಮ್ಮಪ್ಪ ತಪ್ಪ? ಇಲ್ಲಪ್ಪ ನಮ್ಮಪ್ಪಂದು ಹೆಂಗೆ ತಪ್ಪ? ತಲೆ ಒಳಗೆದ್ದ ಪ್ರಶ್ನೆ ನಾಲಿಗೆಗೆ ಇಳಿಯಲಿಲ್ಲ. ಚಪ್ಪಲಿ ತೆಗೆದು ಎಸೆದು, ಇನ್ನು ಮುಂದೆ ಹೀಗೆ ಮಾಡಬೇಡ ಅಂತ ಒಳಗೆ ಕರ್ಕೊಂಡು ಹೋದ್ರು. ನಾನು ಯಾವ ಜಾತಿಯೋಳು ಅದರ ಸಂಸ್ಕೃತಿ ಏನು ಯಾವುದರ ಅರಿವಿಲ್ಲದ ವಯಸ್ಸದು. ಗಾಂಧೀಜಿಯನ್ನು ಬಾಲ್ಯಸಹಜ ಆದರ್ಶಗಳಿಂದ ಪಾಲಿಸಹೋದ ಒಂದು ಮುಗ್ಧ ಮನಸ್ಸದು. ಆ ಮುಗ್ಧ ಮನಸ್ಸಿಗೆ ಆಘಾತ, ದ್ವಂದ್ವಗಳನ್ನು ಹುಟ್ಟಿಸಿತ್ತು ನಡೆದ ಘಟನೆ.

ಮುಂದೆ ನನ್ನ ಜಾತಿ ತಿಳಿದಾಗಲೂ ಗೊಂದಲ, ತಹತಹಗಳು. ಸ್ಪರ್ಶಕ್ಕೂ ಅರ್ಹರಲ್ಲದ ಜಾತಿಗೆ ಸೇರಿದವಳಾಗಿದ್ದೆ. ನನ್ನ ಹಿರಿಯರೆಲ್ಲ ಎಲ್ಲರ ಹೊಲಸು ತೊಳೆಯುವ ಮಾದಿಗರು. ಇದೆಲ್ಲ ತಿಳಿದಾಗ ಉರಿದುಹೋಗಿದ್ದೆ. ತುಂಡು ಉಟ್ಟುಕೊಳ್ಳುತ್ತಿದ್ದ ಗಾಂಧೀಜಿಗಿಂತ ಒಳ್ಳೆ ಸೂಟುಬೂಟು ಹಾಕಿಕೊಂಡು ಹೊಲೆಮಾದಿಗರಿಗೆ ಹೋರಾಡಿದ ಅಂಬೇಡ್ಕರ್ ಹೆಚ್ಚು ಥ್ರಿಲ್ಲಿಂಗ್ ಎನಿಸಿದರು. ಬಾಟ ಕಂಪನಿಯೋನು ಚಪ್ಪಲಿ ಸೈಜ್ ನೋಡಲು ಕಾಲು ಮುಟ್ಟಿದಾಗ ಕತ್ತು ಬಿಗಿದು ಕುಳಿತುಕೊಂಡಿದ್ದೆ. ನಮ್ಮಪ್ಪ ಹೊಲೆಸುತ್ತಿದ್ದ ಅತೀ ಒಳ್ಳೆಯ ಬಟ್ಟೆ ತೊಟ್ಟು, ಅವರು ಮಾಡಿಸಿದ ಚಿನ್ನವನ್ನು ಕಿವಿ, ಕೈ ಕಾಲಿಗೆಲ್ಲಾ ತೊಟ್ಟು ನಾನಾರಿಗೂ ಕಮ್ಮಿ ಇಲ್ಲ ಅಂದ್ಕೋತಿದ್ದೆ. ರೇಶನ್ ಅಕ್ಕಿ ಒಂದು ಸಾರಿಯು ತಿನ್ನದೆ ಬರೀ ಸಣ್ಣಕ್ಕಿ ಅನ್ನ ಉಣ್ಣುವಾಗ ಹೆಮ್ಮೆ ಎನಿಸುತ್ತಿತ್ತು. ಸರ್ಕಾರದೋರು ನೀಡುವ ಭಿಕ್ಷೆಗೆ ಕೈಯೊಡ್ಡದೆ ನಮ್ಮಪ್ಪ ಫೀಸ್ ಕಟ್ಟುವಾಗ ಬೀಗುತ್ತಿದ್ದೆ. ಯಾವುದಕ್ಕೂ ಬಂಡೇಳುತ್ತಿದ್ದ ವಯಸ್ಸದು. ಈಗ ಯಾವುದೆ ಇನ್ಫೀರಿಯಾರಿಟಿ ಕಾಂಪ್ಲೆಕ್ಸ್‌ಗಳಿಲ್ಲದೆ ನನ್ನ ಹಾಗು ನನ್ನವರ ಬಗ್ಗೆ ಯೋಚಿಸುವುದು ಸಾಧ್ಯವಾಗಿದೆ. ಪ್ರಯತ್ನ ಪಟ್ಟು ಸಾಧಿಸಿಕೊಂಡಿದ್ದು.

ನನ್ನ ಅಜ್ಜಿಮನೆ, ಅವಳ ಬಂಧುಬಳಗ, ಊರು ಪರ್ಸೆ, ಹಬ್ಬ, ಅರ್ಸೇವೆ, ಅವರೊಳಗಿನ ಜಗಳ, ಹೊಡೆದಾಟ ಮತ್ತೆ ಅದರ ಕಲೆಕ್ಟಿವ್ ಬದುಕು ಎಲ್ಲದರಲ್ಲೂ ಅರ್ಥ ಇದೆ ಎನಿಸಿದೆ. ನನ್ನಜ್ಜಿ ಮನೆ ನೆನಪು ಮರೆಯಲಾಗದ್ದು. ಅಜ್ಜಿ ಎಂದರೆ ಸಾಮಾನ್ಯಳಲ್ಲ. ೨ ತೆಂಗಿನತೋಟ, ಒಂದು ಕೊಪ್ಲು, ೪ ಹಸುನಲ್ಲೆ ಜೀವ ಇಟ್ಟಿದ್ದ ನನ್ನಜ್ಜಿ ಮಹಾ ಸ್ವಾಭಿಮಾನಿ. ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳನ್ನೆಲ್ಲಾ ಬೆಚ್ಚಗೆ ಪ್ರೀತಿಸುತ್ತಿದ್ದಳು. ದುಡಿದು ತಿನ್ನುತ್ತಿದ್ಲು. ಒಂದೊಂದು ತೆಂಗಿನಮರವು ಅವಳ ಬೆವರು ರಕ್ತದಿಂದ ಬೆಳೆದು ನಿಂತಿವೆ. ಒಂದೊಂದು ಮರವನ್ನು ಅಕ್ಕರೆಯಿಂದ ಬೆಳೆಸಿದ್ಲು. ಯಾರ ಮನೆಗೆ ಒಂದ್ರು ಸುಮ್ನೆ ತಿಂದು ಹೋಗ್ತಾ ಇರ್ಲಿಲ್ಲ. ಜೊತೇಲೆ ರಾಗಿ, ಕಾಯಿ, ಮಾವಿನ ಹಣ್ಣು ಹಿಡ್ಕಂಡೇ ಬರ್ತಾ ಇದ್ಲು.

ಇನ್ನು ಅವಳ ಊರಿಗೆ ಹೋಗ ಬೇಕಾದರೆ ರೈಲಿಳಿದು ೨ ಮೈಲಿ ನಡೆಯಬೇಕು. ದಾರಿಯುದ್ದಕ್ಕೂ ಸಿಗುತ್ತಿದ್ದ ನನ್ನ ಜನರು "ಮಗಾ! ನೀನು ಲಕ್ಷ್ಮಮ್ಮನ ಮೊಮ್ಮಗಳಲ್ವಾ? ಯಾವಾಗ್ ಬಂದೆ ಮಗಾ ಸಂದಾಕಿದ್ದೀಯಾ? ಬಲೆ ಓದ್‌ಕಂಡಿದೀಯಂತೆ" ಅಂತ ಕೇಳ್ತಾ ಇದ್ರು. ಯಾರ ಮನೆ ಮುಂದೆ ಹಾದು ಹೋದ್ರು ಸಾಕು ಕೂಗೋರು, "ಲೋ! ಪಾ ಗಂಗಮ್ಮನ ಮಗಳಲ್ವಾ ನೀನು, ಬರ್ಲಾ ಒಂದೀಟು ಉಣ್ಣೀವಂತೆ, ಮಶೆಪ್ಪ ಮಾಡಯ್ತೆ, ಇಟ್ಟನ್ನು ತಣ್ಣಗಾಗಿಲ್ಲ ಬಾರಪ್ಪ........, ಗಂಗಂನ ಕಿರಿಮಗಳಲ್ವ, ಬಾರ್ಲ ಮರಿ ಬಾಡಿನ ಸಾರು ಒಂದೀಟು ಉಣ್ಣು, ಮೆತ್ತನವೆ ಆಕ್ಕೊಡ್ತೀನಿ ಬಾ" ಅಂತ ಕರೆಯೋರು. "ಬೇಡಮ್ಮ ನಾನು ಬಾಡು ತಿನ್ನಲ್ಲ" ಅಂದ್ರೆ, "ಅಂಗಾ! ಸೈ ಬುಡು ಅಮ್ಮನಂಗೆ ಮಗಳು, ನೂಲಿನಂಗೆ ಸೀರೆ" ಅಂತಿದ್ರು.

ಹೀಗೆ ಕರೆದು ಊಟಕ್ಕಿಟ್ಟು ಧನ್ಯತೆ ಕಾಣುತ್ತಿದ್ದರು. ಎಲ್ಲರಿಗೂ ಸೇರಿದ ಒಂದೇ ದೇವರ ಮನೆ,

ಒಬ್ರ ಮನೆ ಕಾರ್ಯಕ್ಕೆ ಎಲ್ಲ ಮನೆಯವರು ಸೇರ್ತಾ ಇದ್ದದ್ದು, ಒಂದು ಮೇಕೆ ಕಡ್ದು ಎಲ್ರು ಪಾಲ್ ಮಾಡ್ಕೋತ ಇದ್ದಿದ್ದು, ಕಳ್ಳು ಬಿರಿಯೋ ಕಳ್ಳು ಕುಡಿದು ಸಂಸ್ಕೃತವನ್ನು ನಿರರ್ಗಳವಾಗಿ ಹರಿಸಿ, ಉಗ್ದಾಡಿ ಹೊಡೆದಾಡಿ, ಬೆಳಗಾಗೋ ಹೊತ್ಗೆ ಏಳ್ರೋ ಮ್ಯಾಕೆ, ಬೆಳಕರೀತು ಬದುಕು ನೋಡ್ರೋ, ಅಂತ ರಾತ್ರಿ ಜಗಳದ ಗಂಧ ಇಲ್ದೆ ದುಡಿಯೋಕೆ ಹೋಗ್ತಾ ಇದ್ದಿದ್ದು ಹೀಗೆ ಇನ್ನು ಅನೇಕ ನೆನಪುಗಳು ಗುಂಗಾಗಿ ಸುತ್ತುತ್ತವೆ ತಲೆತುಂಬ.

ಆ ಜನ, ಆ ಬದುಕು ಸಾಮಾನ್ಯದ್ದಲ್ಲ. ತುಂಬ ಶ್ರೇಷ್ಠ ಸುಪ್ರೀಮ್ ವಾಲ್ಯೂಗಳಿದ್ದವು ಈ ಬದುಕಿನಲ್ಲಿ. ಅವನ್ನೆಲ್ಲ ಹಗಲೊತ್ತಿನಲ್ಲಿ ದೀಪ ಹಿಡ್ಕಂಡ್ ಹುಡಕ್‌ಬೇಕು ಈಗ. ಆ ನೆನಪುಗಳೆಲ್ಲಿ ನನ್ನಲ್ಲನ್ನು ಹಸಿರಾಗಿವೆ, ಅಲ್ಲಿ ಯಾವ ಲಾಜಿಕ್ ರ್‍ಯಾಷನಾಲಿಟಿಗಳೂ ಇಲ್ಲ. ತುಡಿಯುತ್ತಿದ್ದ ಆ ಬಾಲ್ಯದ ನೆನಪೇ ಈ ಸಂವೇದನೆ. ನನ್ನೆಲ್ಲ ಆದರ್ಶ, ಕನಸು, ಶ್ರಮ ಎಲ್ಲ ಆ ಸಾಮೂಹಿಕವಾದ ಹ್ಯುಮನ್ ಆದ ಬದುಕಿಗಾಗಿ ಬೆಚ್ಚಗಿನ ನನ್ನ ಜನದೊಳಗೆ ಕರಗಿ ಆ ಮಣ್ಣಿಗೆ ಹಿಂತಿರುಗಬೇಕು. ಇದು ಕನಸಷ್ಟೇ, ಕೈಗೆಟುಕದ್ದು. ಆದರೂ ಹಂಬಲಿಕೆ ಆರಿಲ್ಲ, ಕನಸು ಹೆಣೆಯುವುದನ್ನು ಇನ್ನೂ ಬಿಟ್ಟಿಲ್ಲ.

ಸರಸ್ವತಿ ದು.

ಒಳಗಿನ ಚೈತನ್ಯದ ಚಿಲುಮೆ
ಅತಿಸುಖದಿಂದ
ಹೆಪ್ಪುಗಟ್ಟುತ್ತದೆ.
ಅತಿ ದುಃಖದಿಂದ
ಒಣಗುತ್ತದೆ.

ಎಚ್. ಎಸ್. ಸುಜಾತ
ಮೈಸೂರು

ಓದುಗರ ವಿಭಾಗ

ನಿಮ್ಮ ಈ ಹೊಸ ಪತ್ರಿಕೆ 'ಕನ್ನಡ ಪತ್ರಿಕಾ ರಂಗದಲ್ಲಿ' ಅತ್ಯುನ್ನತ ಸ್ಥಾನ ಪಡೆಯಲಿಯೆಂದು ಮನ ತುಂಬ ಹಾರೈಸುತ್ತೇನೆ.

ಬಿ. ಸಾಯಿರಾಬಾನು
ಕಾಡುಗುಡಿ.

ಮಾನಸ ನಿಲ್ಲದೇ ಬರುತ್ತಿರಲಿ, ಯಾರದೇ ಮುಖವಾಣಿಯಾಗದಿರಲಿ ಮಾನಸ ಎಂದು ಹಾರೈಸುವೆ.

ದೇವೇಂದ್ರ ನಾಯ್ಡು
ಅಂಬಿಕಾನಗರ.

ಮಾನಸ ಪತ್ರಿಕೆಯ ವಿಚಾರ ಪೂರಿತ ಲೇಖನಗಳು ನನಗೆ ಅಚ್ಚು ಮೆಚ್ಚಾದವು. ಅವುಗಳನ್ನು ನನ್ನ ಮಿತ್ರ ಮಂಡಳಿಯೊಂದಿಗೆ ಚರ್ಚಿಸುತ್ತಿದ್ದೇನೆ.

ಚಂದ್ರಶೇಖರ
ಹಾಸನ.

ಉತ್ತಮ ಕೆಲಸಕ್ಕೆ ಅಭಿನಂದನೆಗಳು ಮಾನಸ ಎಲ್ಲರ ಮನಸ್ಸನ್ನು ಮತ್ತು ಮನೆ ಮಹಿಳೆಯರ ಮನದೇಗುಲವನ್ನು ಪಡೆಯಲೆಂದು ಹಾರೈಸುವೆ.

ಲಲಿತಾಜ ಮಲ್ಲಾರ
ಹರಿಹರ ಪಲ್ಲತ್ತಕ್ಕ

ನಿಮ್ಮ ಪತ್ರಿಕಾ ಸಾಹಸದಲ್ಲಿ ಯಶಸ್ಸು ಲಭಿಸಲಿ.

ಡಾ॥ ಎಚ್. ಎಸ್ ಸುಜಾತ

ನಿಮ್ಮ ಮಾನಸ ಸಂಚಿಕೆ 4 ಚೆನ್ನಾಗಿ ಮೂಡಿ ಬಂದಿದೆ ಮೌನ ಮಾತಾದಾಗ ಅಂಕಣದಲ್ಲಿ ಈಗೀಗ ಪರಿಶುದ್ಧ ಬೆಳಕನ್ನು ಬೀರುತ್ತಿದೆಯೆಂದು ಅನಿಸುತ್ತದೆ.

ಮಂಜುನಾಥ ಆರ್.
ಬೈಂದೂರ

ಮಾನಸ ತಿಂಗಳ ಪತ್ರಿಕೆ ಮಹಿಳಾ ಆಂದೋಲನ ಹಾಗೂ ಅಮಾನವೀಯ ದೌರ್ಜನ್ಯಗಳನ್ನು ಬೆಳಕಿಗೆ ತರುವಲ್ಲಿ ಕರ್ತವ್ಯ ನಿಷ್ಠೆಯಿಂದ ದುಡಿಯುತ್ತಿದೆ. ಅದಕ್ಕಾಗಿ ಧನ್ಯವಾದಗಳು.

ತಮ್ಮಣ್ಣ
ಮಾದಾಪಟ್ಟಣ.

"ಜೂನ್ ತಿಂಗಳ ಮಾನಸ ವೈವಿಧ್ಯ ಪೂರ್ಣವಾಗಿದ್ದು ಸುಂದರವಾಗಿ ಮೂಡಿ ಬಂದಿದೆ. ಪ್ರತಿ ತಿಂಗಳು ಹೀಗೆ ಹೊರಬರುತಲಿದ್ದು ಭಾರತದ ಮೂಲೆ ಮೂಲೆಯ ಮಹಿಯರಿಗೆ ತಲುಪುವಂತಾಗಲಿ ಎಂದು ಹಾರ್ಧಿಕವಾಗಿ ಹಾರೈಸುತ್ತೇನೆ."

ರಾಧ ಗ. ಗುಡಿ.

ಅಕ್ಕ–ಪಕ್ಕ

ಮಹಿಳೆಯ ಸಮಸ್ಯೆಗಳ ಬಗ್ಗೆ ನಾವು ಯಾವತ್ತೂ ಕಾರ್ಯಕ್ರಮ ಹಾಕಲಿಲ್ಲ. ಇಂಥ ಒಂದು ರಾಜ್ಯ ಮಟ್ಟದ ಸಮಾವೇಶ ಧಾರವಾಡದ ಹತ್ರ ಹಳಿಯಾಳದಲ್ಲಿ ನಡೆದ ನಂತರ ನಾವೇ ರೈತ ಸಂಘಟನೆ ನಾಯಕರಿಗೆ "ಹಿಂಗೆ ರೈತ ಮಹಿಳೆಯರನ್ನು ಕರ್ಕೊಂಬಂದು ಕೂಡಿಸಿ ನಾಲ್ಕು ಜನ ಭಾಷಣ ಮಾಡಿದ್ರೆ ಏನು ಪ್ರಯೋಜ್ನ ಇಲ್ಲ. ಮಹಿಳೆಯರಿಗಾಗೇ ನಾವು ಬೇರೆ ಬೇರೆ ಕಾರ್ಯಕ್ರಮ ಹಾಕಿಕೋಬೇಕು" ಅಂತ ಹೋದೆ.

ಅನಸೂಯಮ್ಮ
ಕರ್ನಾಟಕ ರಾಜ್ಯ ರೈತ ಸಂಘದ
ನಾಯಕಿ.

(ದೂರದರ್ಶನ)

ಪಂಚಾಯತ್ ರಾಜ್ ಮತ್ತು ಜವಾಹರ್ ರೋಜ್ಗಾರ್ ಯೋಜನೆಯಿಂದ ಪಡೆಯುವ ಪ್ರತಿಫಲಗಳ ಬಗ್ಗೆ ಬಣ್ಣಬಣ್ಣದ ಚಿತ್ರಣ ನೀಡುತ್ತ ಮಹಿಳಾ ಮತದಾರರನ್ನು —
ಆಸ್ತಿ ಪಾಸ್ತಿ ವಿಷಯದಲ್ಲಿ ಮತ್ತಷ್ಟು ವಿಳಂಬ ಇಲ್ಲದಂತೆ ಮಹಿಳೆಯರಿಗೆ ಸಮಾನ ಹಕ್ಕು ನೀಡಬೇಕು.

ಫಿಲ್ಲಿನ್‌ಫರಿಯೊ
ಗೋವಾ ವಿಧಾನ ಸಭೆ
ಶಾಸಕಿ.

ವರದಕ್ಷಿಣೆಯ ಸಮಸ್ಯೆಯನ್ನು ಬಿಟ್ಟು ಮಹಿಳೆಯರ ಇನ್ನಿತರ ಸಮಸ್ಯೆಗಳನ್ನು ಪತ್ರಿಕೆಗಳು ನಿರ್ಲಕ್ಷಿಸುತ್ತವೆ.

ಕೇಂದ್ರ ಸಮಾಜಕಲ್ಯಾಣ ಸಚಿವೆ
ಮಾರ್ಗರೇಟ್ ಆಳ್ವ.

ಸಾಮಾಜಿಕ ಅಸಿಷ್ಟವಾದ ವರದಕ್ಷಿಣೆ ಪದ್ಧತಿಯನ್ನು ತೊಡೆದು ಹಾಕಲು ವಿದ್ಯಾವಂತ ಯುವಜನ ಶ್ರಮಿಸಬೇಕು.

ಪಿ. ಸಿ. ಜೈನ್
ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ

ನಾನು ಗಂಡಿನ ಆಲೋಚನೆಗಳಿರುವ ಹೆಣ್ಣು ನಾನು ಯೋಚನೆ ಮಾಡೋದೆಲ್ಲ ಗಂಡಿಸಿನ ತರ ಆದ್ರೆ ಶರೀರ ಹೆಣ್ಣಿನದು.

ಲಕ್ಷ್ಮಿ ಚಿತ್ರನಟಿ

ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದವರ ಮೇಲೆ ಮಹಿಳಾ ಪೊಲೀಸರು ತತ್‌ಕ್ಷಣ ಕ್ರಮ ಜರುಗಿಸಬಹುದು. ಆದರೆ ಇತರ ಪುರುಷ ಪೊಲೀಸರಂತೆ ಮಹಿಳಾ ಪೊಲೀಸರು ಅಸಭ್ಯವಾಗಿ ಬೈಯುವ ಸಾಧ್ಯತೆ ಇಲ್ಲವೇ ಇಲ್ಲ.

ವಿನಯ್‌ಕಿರಣ್‌ಸಿಂಗ್
ದೆಹಲಿ ಪೊಲೀಸ್ ಕಮಿಷನರ್.

ಸ್ತ್ರೀಯೊಬ್ಬಳು ಪ್ರಖ್ಯಾತಳಾಗುತ್ತಿದ್ದಂತೆ ಸಮಾಜ ಅವಳನ್ನು ಪುರುಷನಂತೆ ನೋಡುತ್ತದೆ. ಏಕೆಂದರೆ, ಖ್ಯಾತಿ, ಜನಪ್ರಿಯತೆ, ಯಶಸ್ಸು ಕೇವಲ ಪುರುಷನಿಗೆ ಸೀಮಿತವೆಂದು ಸಮಾಜ ಭಾವಿಸುತ್ತದೆ. ಸ್ತ್ರೀಯೊಬ್ಬಳು ಜನಪ್ರಿಯಳಾದರೆ ಆಯ್ಕೆಯ ಪ್ರಶ್ನೆ ಅವಳಿಗೆದುರಾಗುತ್ತದೆ. ಆಗ ಅವಳು ಕ್ಷುಲ್ಲಕ ಸಂಗತಿಗಳ ಕುರಿತು ಯೋಚಿಸಲು ಪ್ರಾರಂಭಿಸುತ್ತಾಳೆ. ಸ್ತ್ರೀಯರಿಗೆ ಗಂಡ, ತಂದೆ, ತಾಯಿ, ಮಗಳು ಪುರುಷರಿಗೆ ಕೆಲಸ ಕೇಂದ್ರವಾಗಿರುವ ಸಂಗತಿಯ ಹಿನ್ನಲೆಯಲ್ಲಿ ಈ ಗೊಂದಲ ಉಂಟಾಗುತ್ತದೆ.

ಶಬಾನಾಅಜ್ಮಿ ಚಿತ್ರನಟಿ.

ಚಂದಾದಾರರಾಗಿ

ನಿಮ್ಮ ಪ್ರೋತ್ಸಾಹ ಮತ್ತು ಸಹಕಾರಗಳಿಂದಲೇ 'ಮಾನಸ'ವನ್ನು ಪ್ರತಿ ತಿಂಗಳು ಕ್ರಮಬದ್ಧವಾಗಿ ಪ್ರಕಟಿಸಲು ಸಾಧ್ಯ. ನಿಮ್ಮ ಗೆಳೆಯ, ಗೆಳತಿಯರಿಗೆ ಪತ್ರಿಕೆಯನ್ನು ಪರಿಚಯಿಸಿ ಚಂದಾದಾರರನಾಗಿಸಿ. ಆಜೀವ ಚಂದಾದಾರರಾಗಿ (250 ರೂ.) ಪತ್ರಿಕೆಯ ಸ್ವಾವಲಂಬನೆಗೆ ಸಹಾಯಕರಾಗಿ.

ಗ್ರ್ಯಾಫಿಕ್ಸ್

ನೀವು ಮಾನಸ ತಿಂಗಳ ಪತ್ರಿಕೆಯ ಮುಖಪುಟ ಹಾಗೂ ಒಳಗಿನ ಪುಟಗಳ ಗ್ರ್ಯಾಫಿಕ್ಸ್ ಗಮನಿಸಿರಬಹುದು. ಪ್ರತಿ ಸಂಚಿಕೆಯಲ್ಲೂ ಹೀಗೆ ಪ್ರತಿ ಲೇಖನಕ್ಕೆ ಹಾಗೂ ಅಂಕಣಗಳಿಗೆ ಸಂಬಂಧಿಸಿದಂತೆ ಚಿತ್ರಗಳನ್ನು ಪ್ರಕಟಿಸಲಾಗುವುದು. ನೀವು ಕಲಾವಿದರಾಗಿದ್ದರೆ ನಿಮ್ಮ ರಚನೆಗಳನ್ನು 'ಮಾನಸ' ಪ್ರಕಟಣೆಗೆ ಕೊಡಿ.

ಓದುಗರಿಗೆ

'ಮಾನಸ' ದೊಡನೆ ನಿಮ್ಮ ಪತ್ರ ವ್ಯವಹಾರದಲ್ಲಿ ಪ್ರತಿ ಬಾರಿಯೂ ನಿಮ್ಮ ವಿಳಾಸವನ್ನು ಬರೆಯಿರಿ. ಅನಾವಶ್ಯಕವಾಗಿ ಗೊಂದಲ ಕಡಿಮೆ ಆಗುವುದಲ್ಲದೇ, ತಕ್ಷಣ ಪತ್ರಿಸಲು ನಮಗೂ ಸಹಾಯಕವಾಗುತ್ತದೆ. ಜೊತೆಗೆ ವಿಳಾಸದಲ್ಲಿನ ಬದಲಾವಣೆಗಳು ಗಮನಕ್ಕೆ ಬರುತ್ತವೆ.

ಸುದ್ದಿ ಸಂಕಲನ

ರೋಟರಿ ಕ್ಲಬ್‌ನ ಮೊದಲ ಮಹಿಳಾ ಸದಸ್ಯೆ

ರಾಷ್ಟ್ರದ ಪ್ರಥಮ ಮಹಿಳಾ ಐ. ಪಿ. ಎಸ್. ಅಧಿಕಾರಿ ಕಿರಣ್ ಬೇಡಿ ಅವರನ್ನು ರೋಟರಿ ಕ್ಲಬ್‌ನ ಪ್ರಥಮ ಮಹಿಳಾ ಸದಸ್ಯರಾಗಿ ಸೇರಿಸಿಕೊಳ್ಳಲಾಗಿದೆ. ಮಹಿಳೆಯರನ್ನು ಕ್ಲಬ್ ಸದಸ್ಯರನ್ನಾಗಿ ಮಾಡಿಕೊಳ್ಳಬೇಕೆಂದು ರೋಟರಿ ಅಂತರರಾಷ್ಟ್ರೀಯ ಕಾಂಗ್ರೆಸ್ ಇತ್ತೀಚೆಗೆ ನಿರ್ಣಯ ಕೈಗೊಂಡಿದೆ.

ಅತ್ಯಾಚಾರಿ ಶಾಲಾ ನಿರ್ದೇಶಕನಿಗೆ ಮರಣದಂಡನೆ

ಶಾಲಾ ಬಾಲಕಿಯರ ಮೇಲೆ ಪದೇ ಪದೇ ಅತ್ಯಾಚಾರ ಮಾಡಿದ ಉತ್ತರ ಚೀನಾ ಪಟ್ಟಣವಾದ ಕ್ಯೂೋಕ್ಸಿಯನ್‌ನ ಕಿವುಡು ಮೂಕ ಮಕ್ಕಳ ಶಾಲೆಯ ಮಾಜಿ ನಿರ್ದೇಶಕ ಬೈಕ್ಸಿನ್ ಗುಹಾ ಅವರನ್ನು ಇತ್ತೀಚೆಗೆ ಗಲ್ಲಿಗೇರಿಸಲಾಯಿತು. ಈ ಕಿವುಡು ಮೂಕ ಬಾಲಕಿಯರಿಗೆ ಚಿಕಿತ್ಸೆ ನೀಡುವ ನೆಪದಲ್ಲಿ ಅನೇಕ ಬಾರಿ ಅತ್ಯಾಚಾರ ನಡೆಸಿದ್ದರು ಎಂದು ಬೈಕ್ಸಿನ್ ಗುಹಾ ವಿರುದ್ಧ ಆರೋಪ ಹೊರಿಸಲಾಗಿತ್ತು.

ಡಾ. ಕೆ. ವೆಂಕಟಲಕ್ಷಮ್ಮ

1989 ರ ಅಕ್ಟೋಬರ್ ತಿಂಗಳಲ್ಲಿ ನಡೆಯಲಿರುವ ಬೆಂಗಳೂರು ಗಾಯನ ಸಮಾಜದ 21 ನೇ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಹಿರಿಯ ಭರತನಾಟ್ಯ ಕಲಾವಿದೆ ಡಾ. ಕೆ. ವೆಂಕಟಲಕ್ಷಮ್ಮ ಆಯ್ಕೆಯಾಗಿದ್ದಾರೆ. 83 ವರ್ಷ ವಯಸ್ಸಿನ ವೆಂಕಟಲಕ್ಷ್ಮಿ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ.

ಅಪರಾಧಗಳ ಸಂಖ್ಯೆ ಏರಿಕೆ

ಪಶ್ಚಿಮಬಂಗಾಳದಲ್ಲಿ ಅತ್ಯಾಚಾರ, ವರದಕ್ಷಿಣೆ ಇತ್ಯಾದಿ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. "ಪಶ್ಚಿಮಬಂಗಾಳದಲ್ಲಿ ಎಡರಂಗ ಸರಕಾರದ ಹನ್ನೆರಡು ವರ್ಷಗಳು" -- ಪಶ್ಚಿಮಬಂಗಾಳ ಸರಕಾರ ಇತ್ತಿಚೆಗೆ ಪ್ರಕಟಿಸಿರುವ ಗ್ರಂಥದಲ್ಲಿ ಈ ಅಂಶ ವ್ಯಕ್ತವಾಗಿದೆ. ರಾಜ್ಯದಲ್ಲಿ 1988 ರಲ್ಲಿ ಅತ್ಯಾಚಾರ ಪ್ರಕರಣಗಳ ಸಂಖ್ಯೆ 529 ಕ್ಕೆ ಏರಿದೆ. ಆದರೆ 1987 ರಲ್ಲಿ ಈ ಸಂಖ್ಯೆ 422 ಇತ್ತು. ಇದೇ ರೀತಿ 1987 ರಲ್ಲಿ 254 ವರದಕ್ಷಿಣೆ ಸಾವು ಪ್ರಕರಣಗಳು ದಾಖಲಾಗಿತ್ತು. ಇದು 1988 ರಲ್ಲಿ 263 ಕ್ಕೆ ಏರಿದೆ. ಈ ಬಗೆಯ ಅಪರಾಧಗಳ ನಿಯಂತ್ರಣಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಸಲಹಾ ಸಮಿತಿಗಳನ್ನು ಸರ್ಕಾರ ರೂಪಿಸಿದೆ. ಅಲ್ಲದೇ ಇಂತಹ ಪ್ರಕರಣಗಳ ನಿಯಂತ್ರಣಕ್ಕಾಗಿ ಮಹಿಳಾ ಪೊಲೀಸ್ ಅಧಿಕಾರಿಗಳನ್ನು ನೇಮಿಸುವ ಬಗೆಯೂ ಸರಕಾರ ಪರಿಶೀಲಿಸುತ್ತಿದೆ.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ,
2 | ಬಿ ಮಹಾದೇಶ್ವರ ನಿಲಯ, 2ನೇ ಮೇನ್, 2ನೇ ಕ್ರಾಸ್, ಹೊಸಳ್ಳಿ, ವಿಜಯನಗರ, ಬೆಂಗಳೂರು-40.

ನಂ. ಮ್ಯಾಗ್ (5) ಪಿಆರ್‌ಬಿ ಡಿಕ್ಲೇರ್ಡ್ : 284/8889

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂಪಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ : " ಮಾನಸ "
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು – 560067

ಸೂಚನೆ :

ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ : 250 ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್. ಎಂ. ಓ, ಮೂಲಕ ಸ್ವೀಕರಿಸಲಾಗುವುದು.